
ಕೆ. ಬಿ. ಕುಲಕರ್ಣಿ

K.B. Kulkarni



ಬಿ. ಎಂ. ಪಾಟೀಲ್

ಕೆ. ಬಿ. ಕುಲಕರ್ಣಿ
K. B. KULKARNI

ಬಿ.ಎಂ.ಪಾಟೀಲ
B. M. Patil

ಕರ್ನಾಟಕ ಲಲಿತಕಲಾ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು–560 002
ದೂರವಾಣಿ : 080– 22480297
E-mail : kla.karnataka@gmail.com

K.B. Kulkarni A Monograph written by **B.M. Patil**, Published by **K.Sudindhra**
Registrar, Karnataka Lalithakala Academy, Kannada Bhavana, J.C.Road,
Bengaluru-560 002 Ph: 080-22480297 E-mail : kla.karnataka@gmail.com

First Edition	:	2011
Pages	:	X+ 50+ 20 = 80
Copies	:	1000
Price	:	Rs. 80/-
ಹಕ್ಕುಗಳು	:	ಕಾಯ್ದಿರಿಸಿದೆ
ಮುದ್ರಣ	:	೨೦೧೧
ಪುಟಗಳು	:	X+೫೦+೨೦ = ೮೦
ಪ್ರತಿಗಳು	:	೧೦೦೦
ಬೆಲೆ	:	೮೦/–
ಸಂಯೋಜನೆ	:	ಡಾ. ಶಂಕರಪ್ಪ ಕುಂದಗೋಳ
ಆಂಗ್ಲ ಅನುವಾದ	:	ಎಚ್. ಎ. ಅನಿಲ್ ಕುಮಾರ್
ಮುಖಪುಟ ಚಿತ್ರ	:	ಕೆ.ಬಿ. ಕುಲಕರ್ಣಿ

ಪ್ರಕಾಶಕರು
ಕೆ. ಸುಧೀಂದ್ರ
ರಿಜಿಸ್ಟ್ರಾರ್, ಕರ್ನಾಟಕ ಲಲಿತಕಲಾ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು–560 002
ದೂರವಾಣಿ : 080– 22480297
E-mail : kla.karnataka@gmail.com

ಮುದ್ರಕರು
ರಶ್ಮಿ ಪ್ರಿಂಟರ್ಸ್
ನಂ.12ಬಿ, ಮೊದಲನೇ ಅಡ್ಡರಸ್ತೆ
ಕಲಾಸಿಪಾಳ್ಯ ಹೊಸಬಡಾವಣೆ
ಬೆಂಗಳೂರು–560 002
ದೂ : 22115815, 99019 16581



ಅಧ್ಯಕ್ಷರ ನುಡಿ

ಜಗತ್ತಿನ ವ್ಯಾಪಕ ಜ್ಞಾನ, ತಂತ್ರಜ್ಞಾನ ಮತ್ತು ಶೋಧನೆ-ಚಿಂತನೆಗಳನ್ನು ಸತ್ವಪೂರ್ಣವಾಗಿ ದಾಖಲಿಸುವ, ಓದುಗರ ಕಲಾ-ಜ್ಞಾನವನ್ನು ವಿಸ್ತರಿಸಿ ಅವರಲ್ಲಿ ಪುಸ್ತಕ ಸಂಸ್ಕೃತಿಯನ್ನು ಪ್ರಸರಿಸುವ ಕೆಲಸ ನಮ್ಮ ಅಕಾಡೆಮಿಯ ಮೂಲಕ ನಡೆಯುತ್ತಿದೆ. ಶ್ರವ್ಯ, ದೃಶ್ಯ ಮತ್ತು ವಾಚನ ಸಾಮಗ್ರಿಗಳ ಸಮರ್ಪಕ ಉತ್ಪಾದನೆ ಮೂಲಕ ವಿತರಣಾ ಪ್ರಕ್ರಿಯೆಗಳನ್ನು ಅಕಾಡೆಮಿಯ 'ಕಲಾವಾರ್ತೆಯ' ಮೂಲಕ ಪ್ರಯತ್ನಿಸುತ್ತಿದೆ. ಈಗಾಗಲೇ ವೈವಿಧ್ಯಮಯ ಮತ್ತು ವೈಶಿಷ್ಟ್ಯಪೂರ್ಣ ಕೃತಿಗಳನ್ನು ಪ್ರಕಟಿಸುವುದರ ಮೂಲಕ ಅಂತರಂಗ ಹಾಗೂ ಬಹಿರಂಗ ಸೌಂದರ್ಯಗಳನ್ನು ಉಜ್ವಲಿಸುವ ಇದು ತನ್ನ ಮುಂದಿನ ಗುರಿಯ ಕಡೆಗೆ ಆಶಾದಾಯಕವಾಗಿ ಚಲಿಸುತ್ತಿದೆ ಎಂದು ಹೇಳಬಯಸಿದರೆ ಅತಿಶಯೋಕ್ತಿಯಾಗಲಾರದು.

ಕಲೆ ಎಲ್ಲರನ್ನು ಕೈಬೀಸಿ ಕರೆಯುತ್ತದೆ, ಆದರೆ ಕೆಲವರನ್ನು ಮಾತ್ರ ಆರಿಸಿಕೊಳ್ಳುತ್ತದೆ ಎಂಬ ಮಾತು ಚರ್ಚೆಯಲ್ಲಿ ಇದೆ. ಈ ಮಾತು ಕಲೆಯ ಮಹತ್ವ, ವ್ಯಾಪ್ತಿ ಹಾಗೂ ವೈಶಿಷ್ಟ್ಯವನ್ನು ಅತ್ಯಂತ ಪರಿಣಾಮಕಾರಿಯಾಗಿ ಮತ್ತು ಶಕ್ತಿವತ್ತಾಗಿ ಅಭಿವ್ಯಕ್ತಿಸುತ್ತದೆ. ಒಂದರ್ಥದಲ್ಲಿ ಕಲೆ ತನ್ನ ಸತ್ವದ ಅಭಿವ್ಯಕ್ತಿಗಾಗಿ ಎಲ್ಲರನ್ನು ಆಹ್ವಾನಿಸಿದರೂ ಅದರ ಮೂಲ ತತ್ವವನ್ನು ಅರಿತು, ಅನುಭವಿಸಿ, ಧ್ಯಾನಿಸಿ, ಅನುಸಂಧಾನ ಮಾಡಿದ ನಂತರ ಅದರ ಆರಾಧನೆಯಲ್ಲಿ ತೊಡಗಿ ತಮ್ಮನ್ನು ಸಂಪೂರ್ಣವಾಗಿ ಅದಕ್ಕೆ ಅಂಟಿಕೊಂಡವರು ಬಹಳ ವಿರಳವೆಂದೇ ಹೇಳಬಹುದು. ಆದ್ದರಿಂದಲೆ ಕಲಾ ಕ್ಷೇತ್ರದಲ್ಲಿ ಪರಿಣಿತಿಯನ್ನು ಪಡೆಯುವವರು ಆ ಮೂಲಕ ವಿಭಿನ್ನ ಹಾಗೂ ವೈಶಿಷ್ಟ್ಯಪೂರ್ಣ ಕಲಾಕೃತಿಗಳನ್ನು ರಚಿಸುವವರ ಸಂಖ್ಯೆ ಕಡಿಮೆಯೆಂದೇ ತಿಳಿಯಬೇಕಾಗುತ್ತದೆ.

ಇಷ್ಟಾದರೂ ನಮ್ಮ ಪುರಾಣಗಳು, ಇತಿಹಾಸಗಳು, ಪುರಾತತ್ವ ದಾಖಲೆಗಳು ಭಾರತದಲ್ಲಿ ಅನಾದಿಕಾಲದಿಂದಲೂ; ಮಹತ್ವದ ಕಲಾಸಾಧಕರು ಇದ್ದುದನ್ನು ಮತ್ತು ಅಪೂರ್ವ ಕಲಾಕೃತಿಗಳನ್ನು ರಚಿಸಿದ್ದನ್ನು ಸಾದರ ಪಡಿಸುತ್ತವೆ. ಆಧುನಿಕ ಭಾರತವೂ ಸಹ ಇಂತಹ ಸಾಕಷ್ಟು ಕಲಾವಿದರನ್ನು ಸೃಷ್ಟಿಸಿದೆ. ಭಾರತೀಯ ಪಾರಂಪರಿಕ ಕಲೆಯ ಮಹೋನ್ನತಿಯನ್ನು ಮೈಗೂಡಿಸಿ

ಕೊಳ್ಳುವುದರ ಜೊತೆಗೆ ಅನೇಕ ಕಾಲಘಟ್ಟಗಳಲ್ಲಿ ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿ ಮೈದೋರಿದ ಹೊಸ ಹೊಸ ಕಲಾಪಂಥಗಳನ್ನು, ಚಿಂತನೆಗಳನ್ನು, ತಂತ್ರಮಾಧ್ಯಮಗಳನ್ನು ರೂಢಿಸಿಕೊಂಡು ಬಹು ಪ್ರಸಿದ್ಧಿಯನ್ನು ಪಡೆದ ಕಲಾವಿದರು ನಮ್ಮಲ್ಲಿ ಇರುವುದು ಅಭಿಮಾನಪಡುವಂಥದ್ದು. ಆದರೆ ಈ ಕಲಾವಿದರ ಜೀವನ ಮತ್ತು ಸಾಧನೆಗಳ ಬಗೆಗಿನ ವಿದ್ವತ್ ಹಾಗೂ ಅಧಿಕೃತ ದಾಖಲೆಗಳು ಹೆಚ್ಚಿನ ಪ್ರಮಾಣದಲ್ಲಿ ದೊರೆಯದಿರುವುದು ವಿಷಾದದ ಸಂಗತಿ. ಮತ್ತೊಂದೆಡೆ ಈ ಕ್ಷೇತ್ರದ ಮಹಾಸಾಧಕರನ್ನು, ಅವರ ಸಿದ್ಧಿ ಸಾಧನೆಗಳನ್ನು ಜೀವನದ ಏರಿಳಿತಗಳನ್ನು ಮತ್ತು ಅನುಭವಿಸಿದ ಸಾಕಷ್ಟು ಸಂತೋಷಗಳನ್ನು ಪರಿಚಯಿಸುವ ಗ್ರಂಥಗಳು ಅತ್ಯಲ್ಪವೇ ಎಂದು ಹೇಳಬಹುದು.

ತಮ್ಮೆಲ್ಲರಿಗೂ ತಿಳಿದಿರುವಂತೆ ಕರ್ನಾಟಕ ಲಲಿತಕಲಾ ಅಕಾಡೆಮಿಯು ವಿಶ್ವಭಾಷೆಯಾದ ದೃಶ್ಯಜ್ಞಾನವನ್ನು ಕನ್ನಡ ಭಾಷೆಯ ಮೂಲಕ ಪ್ರಚುರಗೊಳಿಸುವ ಕಾರ್ಯಕ್ರಮವನ್ನು ಚಟುವಟಿಕೆಗಳ ನಡುವೆಯೂ ಅತ್ಯಂತ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದೆ. ಕಲಾಚಿಂತಕರು, ದೃಶ್ಯಸಾಹಿತ್ಯದ ಬಗೆಗೆ ಕಳಕಳಿ ಉಳ್ಳವರೂ ಆಗಿರುವ ಶ್ರೀ ಬಿ.ಎಂ.ಪಾಟೀಲ್ ಅವರು ರಚಿಸಿದ. ಕೆ.ಬಿ.ಕುಲಕರ್ಣಿ ಅವರ ಕೃತಿಯನ್ನು ಅಕಾಡೆಮಿಯು ಪ್ರಕಟಿಸಲು ಹೆಮ್ಮೆಪಡುತ್ತದೆ. ಕೆಲವೇ ಮಾತುಗಳಲ್ಲಿ ಕಲಾವಿದರ ಸಾಧನೆಗಳನ್ನು ಬಿಂಬಿಸುವ ಕೌಶಲ ಇಲ್ಲಿ ಸುವ್ಯಕ್ತವಾಗಿವೆ. ಲೇಖಕರು ಸರಳವಾಗಿ, ಎಲ್ಲರೂ ಪರಿಚಯ ಮಾಡಿಕೊಳ್ಳಲು ಅನುವುಮಾಡಿ ಕೊಟ್ಟಿದೆ. ಈ ಬರಹಗಳು ಕಲಾ ವಿದ್ಯಾರ್ಥಿಗಳಿಗೂ ಕಲಾಸಕ್ತರಿಗೂ ಬಹು ಉಪಯುಕ್ತವಾಗಿವೆ. ಇಂತಹ ವಿಶಿಷ್ಟ ಕೃತಿಯನ್ನು ಅಕಾಡೆಮಿಗೆ ಬರೆದುಕೊಟ್ಟ ಇವರಿಗೆ ನಮ್ಮ ಅಕಾಡೆಮಿಯ ಪರವಾಗಿ ಅಭಿನಂದನೆಗಳು ಸಲ್ಲುತ್ತವೆ.

– ನಾಡೋಜ ಡಾ. ಜೆ.ಎಸ್. ಖಂಡೇರಾವ್



ಲೇಖಕರ ನುಡಿ

ವ್ಯಕ್ತಿ ಕುರಿತು ಬರೆಯುವಾಗ ಆತ ಗತಿಸಿದ್ದರೆ ಆತನಿಗೆ ಸಂಬಂಧಿಸಿದ ದಾಖಲೆಗಳು ನಿಖರ ಮಾಹಿತಿ ಸಂಗ್ರಹಿಸುವುದು ಬಹುಕಷ್ಟದ ಕೆಲಸ ದಿವಂಗತ ಕಲಾವಿದ ಕೃಷ್ಣರಾವ್‌ರನ್ನು ಕುರಿತು ಬರೆಯುವಲ್ಲಿ ಇಂತಹದೇ ಸಮಸ್ಯೆ ಎದುರಾಯಿತು ಕೃಷ್ಣರಾವ್ ನಮ್ಮ ಬೆಳಗಾಂವ್‌ದವರು ಗಡಿನಾಡ ಕನ್ನಡಿಗರಾದರೂ ಕನ್ನಡಿಗರಿಗೆ ಅಪರಿಚಿತರಾಗಿಯೇ ಬೆಳೆದು ಬಂದಿದ್ದರು ಬೆಳಗಾವಿಯಲ್ಲಿದ್ದು ಕೊಂಡು ತಮ್ಮ ಕಲಾಕೃತಿಗಳ ರಚನೆ ಕಲಾ ಶಿಕ್ಷಣ ನೀಡುತ್ತ, ಕಲಾಸೇವೆಯನ್ನು ಮಾಡುತ್ತ ಪ್ರದರ್ಶನ ಹಾಗೂ ಪ್ರಚಾರದಿಂದ ದೂರವಿದ್ದ ಕೃಷ್ಣರಾವ್‌ರವರು ಈ ಭಾಗದ ಜನಕ್ಕೆ ಕಲಾವಿದ ಕೆ.ಬಿ.ಕುಲಕರ್ಣಿ ಎಂದೇ ಪರಿಚಿತರಾಗಿರುವರು.

ಕೆ.ಬಿ.ಕುಲಕರ್ಣಿ ಅವರು ನಮ್ಮ ಕಲಾ ಶಾಲೆಯಾದ ಹಾಲಭಾವಿ ಸ್ಕೂಲ ಆಫ್ ಆರ್ಟ ಧಾರವಾಡದಲ್ಲಿ ಏರ್ಪಡಿಸಿದ್ದ ಕಲಾ ಪ್ರಾತ್ಯಕ್ಷಿಯನ್ನು 1987ರಲ್ಲಿ (Women Life Study) ಮಹಿಳೆಯ ವ್ಯಕ್ತಿ ಚಿತ್ರವನ್ನು ಸುಂದರವಾಗಿ ರಚನೆ ಮಾಡಿದ್ದರು ಆಗ ನಾನಿನ್ನೂ ವಿದ್ಯಾರ್ಥಿಯಾಗಿದ್ದು, ಅವರ ಬಗ್ಗೆ ಅಷ್ಟೊಂದು ತಿಳಿಯಲು ಯತ್ನಿಸಲಿಲ್ಲ ಆ ಸಂದರ್ಭದಲ್ಲಿ ಕಲಾವಿದರನ್ನು ಪರಿಚಯಿಸುವುದು ಅಷ್ಟಕ್ಕಷ್ಟೇ ನಮ್ಮಲ್ಲಿ ಲಭ್ಯವಿದ್ದ ಮಾಹಿತಿಯಲ್ಲೇ ತೃಪ್ತಿ ಕಂಡಿದ್ದೆವು. ಆದರೆ 2009ರಲ್ಲಿ ಗಡಿನಾಡ ಕನ್ನಡಿಗರಾಗಿ ಕನ್ನಡಿಗರಿಗೇ ಅಪರಿಚಿತರಾಗಿರುವ ಕೆ.ಬಿ.ಕುಲಕರ್ಣಿ ಅವರನ್ನು ಪರಿಚಯಿಸುವ ಉದ್ದೇಶದಿಂದ ಬಿ.ವಿ.ಎ. ಅಂತಿಮ ವರ್ಷದ ವಿದ್ಯಾರ್ಥಿನಿ ಕುಮಾರಿ ಲತಾ.ವಿ.ಪಾಟೀಲ ಅವರಿಂದ ಕಿರು ಪ್ರಬಂಧವನ್ನು ನಾನೇ ಮಾರ್ಗದರ್ಶಕನಾಗಿ ಬರೆಸಲಾಗಿತ್ತು ಆಗಲೂ ಕೂಡಾ ಅಷ್ಟೊಂದು ಸೂಕ್ತ ದಾಖಲೆಗಳು ಲಭ್ಯವಾಗಿರಲಿಲ್ಲ ಅವರ ಕಲಾಕೃತಿಗಳನ್ನು ಪ್ರಮುಖವಾಗಿಟ್ಟುಕೊಂಡು ಬರೆಸಲಾಗಿತ್ತು.

ಕರ್ನಾಟಕ ಲಲಿತಕಲಾ ಅಕಾಡೆಮಿಯು ಕಲಾವಿದರ ಮಾಲಿಕೆಯಲ್ಲಿ ನಾಡಿನ ಕಲಾವಿದರನ್ನು ಪರಿಚಯಿಸುವ ಸ್ತುತ್ಯಾರ್ಹಕಾರ್ಯ ಮಾಡುತ್ತಿದ್ದು ಪ್ರಸಕ್ತ ಅವಧಿಯಲ್ಲಿ ಕೆ.ಬಿ.ಕುಲಕರ್ಣಿ ಅವರ ಕುರಿತು ಪುಸ್ತಕ ಪ್ರಕಟಿಸಲು ಉದ್ದೇಶಿಸಿ ನನಗೆ ಬರೆದು ಕೊಡಬೇಕೆಂದು ಆದೇಶಿಸಿ ಪತ್ರ ಬಂದಿತು.

ಈ ಹಿನ್ನೆಲೆಯಲ್ಲಿ ಬೆಳಗಾಂವಿಯಲ್ಲಿರುವ ಅವರ ಮನೆಗೆ ಹೋಗಿ ಅವರ ಸಹೋದರನ ಮೊಮ್ಮಗ ಶಿರೀಶ್ ಕುಲಕರ್ಣಿ ಅವರನ್ನು ಸಂದರ್ಶಿಸಿ ಕಲಾವಿದ ಕೆ.ಬಿ.ಕೆ. ಅವರ ಮೂಲ ಕಲಾಕೃತಿಗಳನ್ನು ನಮಗೆ ಛಾಯಾಚಿತ್ರ ಮಾಡಿಕೊಳ್ಳಲು ನೀಡಿದ್ದು ಹಾಗೂ ಸಂಬಂಧಿಸಿದ ಪೇಪರ್ ಕಟಿಂಗ್ಸ್ ಕ್ಯಾಟಲಾಗ್‌ಗಳನ್ನು ಪಡೆದು ಅವರ ಅನುಮತಿಯನ್ನು ಪಡೆಯುವದರೊಂದಿಗೆ ಕಲಾವಿದರ ಕುರಿತು ಅವರ ಅಭಿಪ್ರಾಯಗಳನ್ನು ಸಂಗ್ರಹಿಸಲಾಯಿತು.

ದಿವಂಗತ ಕೃಷ್ಣರಾವ್‌ರವರ ಹಿರಿಯ ಸಹೋದರ ಶಂಕರರಾವ್ ಅವರನ್ನು ಸಂಪರ್ಕಿಸಿದಾಗ ಬಹಳ ಸಂತೋಷದಿಂದ ತಮಗೆ ತಿಳಿದ ಎಲ್ಲಾ ಮಾಹಿತಿಯನ್ನು ಒದಗಿಸಿಕೊಟ್ಟರು.


ಈ ಕಾರ್ಯಕ್ಕೆ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಸಹಕರಿಸಿದ ಎಲ್ಲಾ ಮಹನೀಯರಿಗೂ ಇಂಗ್ಲೀಷ್‌ಗೆ ಅನುವಾದಿಸಿಕೊಟ್ಟ ಹಿರಿಯರೂ ಮಿತ್ರರೂ ಆದ ಡಾ. ಎಚ್.ಎನ್. ಚಿತ್ರಗಾರ ಅವರಿಗೂ ವಿಷಯ ಸಂಗ್ರಹಣೆಗೆ ಸಹಕರಿಸಿದ ವಿದ್ಯಾರ್ಥಿನಿ ಲತಾ ವಿ.ಪಾಟೀಲ ಅವರಿಗೂ ಹಾಗೂ ಕೃಷ್ಣರಾವ್ ಅವರ ಕುಟುಂಬ ವರ್ಗದ ಎಲ್ಲ ಸದಸ್ಯರಿಗೂ ನನ್ನ ಕೃತಜ್ಞತೆಗಳು.

ನನ್ನ ಬೆಳವಣಿಗೆಗೆ ಪ್ರೋತ್ಸಾಹಿಸಿ ಆಶೀರ್ವದಿಸಿದ ಸುತ್ತೂರು ಶ್ರೀ ವೀರಸಿಂಹಾಸನಾಧೀಶ್ವರರಾದ ಜಗದ್ಗುರು ಶ್ರೀ ಶಿವರಾತ್ರೀಶ್ವರರನ್ನು ಸ್ಮರಿಸುತ್ತ, ನನ್ನ ಬರವಣಿಗೆಗೆ ಪ್ರೋತ್ಸಾಹಿಸಿ ಮಾರ್ಗದರ್ಶನ ಮಾಡಿದ ಡಾ. ಎಸ್. ಸಿ. ಪಾಟೀಲರಿಗೂ ಸ್ನೇಹಿತ ಪಿ.ಬಿ. ಗವಾನಿ ಹಾಗೂ ಜೆ.ಎಸ್. ಎಸ್. ಹಾಲಭಾವಿ ಸ್ಕೂಲ ಆಫ್ ಆರ್ಟ ಧಾರವಾಡದ ಪ್ರಾಚಾರ್ಯರಾದ ಶ್ರೀಮತಿ ಗಾಯತ್ರಿ ಗೌಡರ ಹಾಗೂ ಸಿಬ್ಬಂದಿ ವರ್ಗದವರಿಗೆ ಗೌರವಪೂರ್ವಕವಾಗಿ ಸ್ಮರಿಸಿ ಕೊಳ್ಳುತ್ತೇನೆ.


ನನ್ನ ತಂದೆ ಮಳಗೊಂಡ ಹಾಗೂ ತಾಯಿ ಶಾರದಾಬಾಯಿ ಮತ್ತು ಧರ್ಮಪತ್ನಿ ಶಾಂತಾ ಅವರೊಂದಿಗೆ ಮಗಳು ವಾಣಿಶ್ರೀ ಮಗ ವಿನಯ ಕುಮಾರ ಅವರೆಲ್ಲರ ಸಹಕಾರವನ್ನು ನೆನೆಯುತ್ತೇನೆ. ನನ್ನ ಪುಸ್ತಕವನ್ನು ಅಚ್ಚುಕಟ್ಟಾಗಿ ಗಣಕೀಕೃತಗೊಳಿಸಿದ ಶ್ರೀ ಆರ್. ಕೆ. ಹೆಗಡೆ ಅವರಿಗೂ ಹಾಗೂ ಇದನ್ನು ಸುಂದರವಾಗಿ ಅಚ್ಚು ಮಾಡಿರುವ ರಶ್ಮಿ ಪ್ರಿಂಟರ್ಸ್‌ನವರಿಗೂ ಮತ್ತು ಅವರ ಸಿಬ್ಬಂದಿಯವರಿಗೂ ನನ್ನ ಕೃತಜ್ಞತೆಗಳು.

ಮುಖ್ಯವಾಗಿ ಪುಸ್ತಕ ಬರೆಯಲು ತಿಳಿಸಿದ ಅಕಾಡೆಮಿಯ ಸದಸ್ಯರಾದ ಡಾ. ಶಂಕರ ಕುಂದಗೋಳ ಅವರಿಗೆ ಕೃತಜ್ಞತೆಗಳು. ಹಾಗೂ ಇದಕ್ಕೆ ಸಮ್ಮತಿಸಿದ ಲಲಿತ ಕಲಾ ಅಕಾಡೆಮಿಯ ಅಧ್ಯಕ್ಷರಾದ ನಾಡೋಜ ಡಾ. ಜೆ.ಎಸ್.ಖಂಡೇರಾವ್ ಅವರಿಗೂ ಹಿಂದಿನ ರಿಜಿಸ್ಟಾರ್ ಶ್ರೀಮತಿ ವಿಜಯಲಕ್ಷ್ಮಿ ಮತ್ತು ಈಗಿನ ರಿಜಿಸ್ಟಾರ್ ಕೆ. ಸುಧೀಂದ್ರ ಅವರಿಗೂ ಹಾಗೂ ಪ್ರಕಟಣಾ ಸಮಿತಿ ಹಾಗೂ ಸರ್ವ ಸದಸ್ಯರಿಗೂ ನನ್ನ ಹೃತ್ಪೂರ್ವಕ ಅಭಿನಂದನೆಗಳು.

– ಬಿ.ಎಂ. ಪಾಟೀಲ, ಧಾರವಾಡ



ಕೆ.ಬಿ.ಕುಲಕರ್ಣಿ



ಕೆ.ಬಿ.ಕುಲಕರ್ಣಿ

ಕೃಷ್ಣರಾವ್ ಬಿ. ಕುಲಕರ್ಣಿ

ಆದಿಮಾನವನ ಕಾಲದಿಂದಲೂ ಕಲೆಯು ಮಾನವನ ಜೊತೆ ಜೊತೆಯಾಗಿಯೇ ಬೆಳೆದು ಬಂದಿದ್ದು ಸಂಸ್ಕೃತಿಯೂ ಬೆಳೆಯುತ್ತಲೇ ಬಂದಿದೆ ಸುತ್ತಲಿನ ಪರಿಸರದಿಂದಾಗುವ ಬದಲಾವಣೆಗಳು ಬದುಕಿನಂತೆ ಕಲೆಯೂ ಸಹ ಬದಲಾಗುತ್ತ ಬಂದಿದೆ. ಒಂದು ಸಂಸ್ಕೃತಿಯಿಂದ ಮತ್ತೊಂದು ಸಂಸ್ಕೃತಿಗೆ ಸಂಪರ್ಕ ಸೇತುವೆ ಆಗಿ ಕಲೆ ತನ್ನದೇ ಆದ ವಿಶಿಷ್ಠ ಕಾಣಿಕೆಯನ್ನು ಪ್ರಪಂಚಕ್ಕೆ ನೀಡಿದ್ದು ಸರ್ವ ವಿಧಿತ, ಸಾಮಾಜಿಕವಾಗಿ ಧಾರ್ಮಿಕವಾಗಿ, ರಾಜಕೀಯವಾಗಿ ಐತಿಹಾಸಿಕವಾಗಿ ಆಯಾ ಸಂದರ್ಭಗಳಿಗೆ ಅನುಸರಿಸಿ ಅಗತ್ಯತೆಗಳನ್ನು ತೀರಿಸಲು ಚಿತ್ರಕಲೆಯು ಬೆಳೆದು ಬಂದಿದ್ದು ಕಾಣುತ್ತೇವೆ. ಭಾರತದಲ್ಲಿ ದೇವಾಲಯ, ಗುಹಾದೇವಾಲಯ, ಮಠ, ಮಂದಿರ, ಮನೆ ಅರಮನೆಗಳ ಭಿತ್ತಿಗಳ ಮೇಲೆ ಚಿತ್ರಗಳು ಬೆಳೆದು ಬಂದಿದ್ದು ಒಂದೆಡೆಯಾದರೆ, ತಾಳೆಗರಿ ಹಸ್ತಪ್ರತಿಗಳು ಕಾಗದದ ಹಸ್ತ ಪ್ರತಿಗಳು, ಶಿಲೆ, ಭಿತ್ತಿ, ಮರ, ಲೋಹ, ಗಾಜು ಹೀಗೆ ವಿವಿಧ ಮಾಧ್ಯಮಗಳಲ್ಲಿ ಚಿತ್ರಕಲೆಯು ಬೆಳೆದು ಬಂದಿದೆ. ಮಾನವನ ಜೀವನದ ಒಂದು ಅಂಗವೆನ್ನುವ ಹಾಗೆ ರೂಪುಗೊಂಡಿದ್ದು ಚಿತ್ರಕಲೆಯು ಮಾನವನ ಉನ್ನತಿ ಹಾಗೂ ವ್ಯಕ್ತಿತ್ವ ವಿಕಾಸಕ್ಕೆ ಕೈಗನ್ನಡಿಯಾಗಿದೆ.

ಐತಿಹಾಸಿಕವಾಗಿರುವ ಮೋಹೆಂಜೋಧಾರೋ ಹರಪ್ಪಾಗಳಲ್ಲಿಯ ನಾಗರೀಕತೆಯ ಸಂಸ್ಕೃತಿಯಿಂದ ಈವರೆಗೂ ಚಿತ್ರಗಳು ಅನೇಕ ದಾಖಲೆಗಳನ್ನು ನೀಡುತ್ತವೆ. ಇಂತಹ ಚಿತ್ರಗಳನ್ನು ಬಿಡಿಸಿದ ಕಲಾವಿದ ಎಲೆಮರೆಯ ಕಾಯಿಯಂತೆ ಹುದುಗಿಕೊಂಡು. ಸಾಮಾಜಿಕ ಕ್ಷೇತ್ರಕ್ಕೆ ಮಹತ್ವದ ಕಾಣಿಕೆಯನ್ನು ನೀಡಿದ್ದಾನೆ. ಅಂತಹ ಮಹನೀಯರು ಸಮಾಜಕ್ಕೆ ಸಲ್ಲಿಸಿದ ಸೇವೆಯನ್ನು ಕುರಿತು ಹಾಗೂ ಕಲಾಕೃತಿ ಮತ್ತು ವ್ಯಕ್ತಿ ವೈಶಿಷ್ಯತೆಗಳನ್ನು ಪರಿಚಯಿಸುವ ಉದ್ದೇಶದಿಂದ ಕಲಾವಿದರಾದ ಕೃಷ್ಣರಾವ್.ಬಿ.ಕುಲಕರ್ಣಿ ಅವರನ್ನು ಪರಿಚಯಿಸುವ ಅಲ್ಪ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಬಾಲ್ಯಜೀವನ ಮತ್ತು ಸಾಂಸ್ಕೃತಿಕ ಪರಿಸರ:

ಬೆಳಗಾಂವಿಯ ಪಶ್ಚಿಮ ದಿಕ್ಕಿನಲ್ಲಿರುವ "ಹಿಂಡಲಗಾ" ಗ್ರಾಮದಲ್ಲಿದ್ದ ಭೀಮರಾವ್ ಕುಲಕರ್ಣಿ ಮತ್ತು ಯಮುನಾ ಬಾಯಿಯವರ ಆದರ್ಶ ಕುಟುಂಬ

ಈದಂಪತಿಗಳಿಗೆ ಆರು ಜನಮಕ್ಕಳು ಇವರಲ್ಲಿ ಕೊನೆಯ ಮಗನಾಗಿ 1920 ಫೆಬ್ರುವರಿ 4 ರಂದು ಕೃಷ್ಣರಾವ್‌ರವರು ಜನಿಸಿದರು. ಇವರಿಗೆ ಇಬ್ಬರು ಅಣ್ಣಂದಿರು, ಮೂವರು ಅಕ್ಕಂದಿರು ಇದ್ದರು. ಹಿರಿಯ ಅಣ್ಣನಾದ ಶಂಕರರಾವ್ ಅವರು ಕೃಷ್ಣರಾವ್ ಅವರಲ್ಲಿರುವ ಚಿತ್ರಕಲೆಯ ಅಭಿರುಚಿ ಅವರ ಬೆಳವಣಿಗೆಗೆ ಸೂಕ್ತ ಅವಕಾಶಗಳನ್ನು ಮಾಡಿಕೊಟ್ಟರು. ಇನ್ನೊಬ್ಬ ಅಣ್ಣನಾದ ರಾಮಚಂದ್ರರಾವ್ ಅವರ ಮಗನೊಬ್ಬನು ಚಿತ್ರಕಲೆಯಲ್ಲಿ ಉತ್ತಮ ಕೆಲಸ ಮಾಡುತ್ತ ಮುಂಬೈ ನಗರದಲ್ಲಿ ಒಳ್ಳೆಯ ಹೆಸರನ್ನು ಮಾಡಿಕೊಂಡಿದ್ದರು. ಹೀಗೆ ಇವರದೊಂದು ಕಲಾವಿದರ ಕುಟುಂಬವೇ ಆಗಿತ್ತು.

ಕೃಷ್ಣರಾವ್ ಕುಲಕರ್ಣಿ ಅವರು ತಮ್ಮ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಬೆಳಗಾವಿಯಲ್ಲಿಯೇ ಮುಗಿಸಿದರು. ಈ ಹಂತದಲ್ಲಿಯೇ ಕೃಷ್ಣರಾವ್ ಅವರು ಚಿತ್ರಕಲೆಯ ಕುರಿತು ವಿಶೇಷ ಆಸಕ್ತಿಯನ್ನು ಹೊಂದಿದ್ದರು. ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಚಿತ್ರಕಲೆಯನ್ನು ಕಲಿಸುವ ವಾರದ ಅವಧಿ ಕೇವಲ ಎರಡು ಮಾತ್ರ ಆಗಿತ್ತು. ಚಿತ್ರಕಲೆಗೆ ಸಂಬಂಧಿಸಿದ ಈ ಎರಡು ಅವಧಿಗಳಿಗಾಗಿಯೇ ಜಾತಕ ಪಕ್ಷಿಯಂತೆ ಕಾಯುತ್ತ ಕುಳಿತಿರುತ್ತಿದ್ದೆ ಎನ್ನುವ ಕೃಷ್ಣರಾವ್ ಕುಲಕರ್ಣಿ ಅವರು ಚಿತ್ರಕಲೆಗೆ ಸಂಬಂಧಿಸಿದ ರೇಖೆ ವರ್ಣ ತಂತ್ರ ವಿನ್ಯಾಸಗಳ ಕುರಿತು ಏನೇ ಹೇಳಿದರೂ ಅತ್ಯಂತ ಶೃದ್ಧೆಯಿಂದ ಕಲಿಯುತ್ತಿದ್ದೆ ಎಂದು ಅಂದಿನ ನೆನಪುಗಳನ್ನು ಮೆಲಕು ಹಾಕುವ ಕೃಷ್ಣರಾವ್ ಅವರು ಚಿಕ್ಕಂದಿನಿಂದಲೇ ಚಿತ್ರಕಲೆಯಲ್ಲಿ ಆಸಕ್ತಿ ಇದ್ದುದರಿಂದ ಕಣ್ಣಿಗೆ ಏನು ಕಾಣಿಸುತ್ತದೆಯೋ ಅದು ಮನಸ್ಸಿಗೂ ಹಿಡಿಸಿದರೆ ಚಿತ್ರಿಸಿಯೇ ಬಿಡುವ ಹವ್ಯಾಸ ಅವರದಾಗಿತ್ತು. ಉಳಿದೆಲ್ಲ ವಿಷಯಗಳು ಅವರ ಪಾಲಿಗೆ ಗೌಣವಾಗಿದ್ದವು. ಅಂದರೆ, ಅಷ್ಟಕ್ಕಷ್ಟೇ ಮಾಡಿಕೊಳ್ಳುತ್ತಿದ್ದರು. ಎಷ್ಟೋ ಸಲ ಶಿಕ್ಷಕರು ಮುಂದುಗಡೆ ಪಾಠವನ್ನು ಮಾಡುತ್ತಿದ್ದರೆ, ಹಿಂದಿನಿಂದ ಇವರು ಯಾವುದರ ಮೇಲಾದರೂ ಚಿತ್ರವನ್ನು ಗೀಚುತ್ತಾ ಕುಳಿತಿರುತ್ತಿದ್ದರು. ಈ ವಿಷಯವಾಗಿ ಕೆಲವೊಂದು ಶಿಕ್ಷಕರಿಂದ ಶಿಕ್ಷೆಯನ್ನು ಅನುಭವಿಸಬೇಕಾಗುತ್ತಿತ್ತು ಎನ್ನುವ ಕೃಷ್ಣರಾವ್‌ರವರು ಅಂತೂ 1937ರಲ್ಲಿ ಮೆಟ್ರಿಕ್ ಪರೀಕ್ಷೆಯನ್ನು ಪೂರ್ಣಗೊಳಿಸಿದರು ನಂತರ ಚಿತ್ರಕಲೆಯ ಅಧ್ಯಯನ ಮಾಡಲು ನಿರ್ಧರಿಸಿದರು.

ಆಗಿನ ಕಾಲದಲ್ಲಿ ಕಲೆಯನ್ನು ಕಲಿಯಬೇಕಾದರೆ, ಕಲಾಕೃತಿಗಳನ್ನು ನೋಡಬೇಕೆಂದರೆ, ಚಿತ್ರಕಲೆಯನ್ನು ಅರಿಯಬೇಕಾದರೆ, ಪುಣಾ ಮುಂಬೈಗಳಂತಹ ಪಟ್ಟಣಗಳಿಗೆ ಹೋಗಬೇಕಾಗುತ್ತಿತ್ತು. ಆಗ ಈಗಿನಂತೆ ವಾಹನಗಳ ವ್ಯವಸ್ಥೆಯೂ ಅಷ್ಟೊಂದು ಸರಿಯಾಗಿರಲಿಲ್ಲ. ಅಂತಹ ದೊಡ್ಡ ಪಟ್ಟಣದಲ್ಲಿ ಉಳಿದುಕೊಂಡು ಅಧ್ಯಯನ ಮಾಡುವುದು ಸುಲಭದ ಕೆಲಸವಾಗಿರಲಿಲ್ಲ. ಸಹೋದರ ಶಂಕರರಾವ್ ಅವರ ಸಹಾಯ ಹಾಗೂ ಸಹಕಾರದೊಂದಿಗೆ ಹೆಚ್ಚಿನ ಕಲಾವಿದ್ಯಾಭ್ಯಾಸ ಮಾಡಲು ಮುಂಬೈಗೆ ಹೋಗಲು ಸಾಧ್ಯವಾಯಿತು ಎಂದು ಕೃಷ್ಣರಾವ್ ಅವರು ನೆನೆಯುತ್ತಾರೆ.

ಶಿಕ್ಷಣ ಮತ್ತು ವೃತ್ತಿಜೀವನ :

ಕೃಷ್ಣರಾವ್ ಭೀಮರಾವ್ ಕುಲಕರ್ಣಿ ಅವರು 1942ರಲ್ಲಿ ಚಿತ್ರಕಲಾ ಶಿಕ್ಷಕರಾಗಿ ಬೆಳಗಾವಿಯ ಸೆಂಟ್ರಲ್ ಸ್ಕೂಲದಲ್ಲಿ ಎರಡು ವರುಷ ಕೆಲಸ ಮಾಡಿದರು. ಮುಂದೆ ಮುಂಬೈದ ಸರ್.ಜೆ.ಜೆ. ಕಲಾಶಾಲೆಗೆ ಸೇರಿಕೊಂಡರು. 1945ರಲ್ಲಿ ಚಿತ್ರಕಲಾ ಶಿಕ್ಷಕರ ತರಬೇತಿ ಕೋರ್ಸನ್ನು (ಡಿ.ಟಿ.ಸಿ) ಪಾಸಾದರು. ಅದೇ ವರುಷ ಅಂದರೆ 1945ರಲ್ಲಿಯೇ ಬೆಳಗಾವಿಯ ಮರಾಠಾಮಂಡಳ ಪ್ರೌಢಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿ ನೇಮಕಗೊಂಡರು. 4 ವರುಷಗಳವರೆಗೆ ಅಂದರೆ 1949ರ ವರೆಗೆ ಸೇವೆ ಸಲ್ಲಿಸಿದರು. ಈ ಮಧ್ಯ ಆರ್ಟ ಮಾಸ್ಟರ್ (ಎ.ಎಂ) ಪದವಿಯನ್ನು 1947ರಲ್ಲಿ ಜೆ.ಜೆ.ಕಲಾಶಾಲೆಯಿಂದ ಪಡೆದುಕೊಂಡರು. 1949ರಲ್ಲಿ ಮತ್ತೇ ಬೇರೆ ಸೇಂಟಪಾಲ್ ಪ್ರೌಢಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿ ಸೇವೆಸಲ್ಲಿಸಿದರು. ಹೀಗೆ ವಿವಿಧ ಪ್ರೌಢಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಾ ಕಲಾಶಿಕ್ಷಣವನ್ನು ಪೂರೈಸಿಕೊಂಡ ಕೃಷ್ಣರಾವ್ ಕುಲಕರ್ಣಿ ಅವರು ಮುಂಬೈದಲ್ಲಿರುವ ಹಲ್ದನ್‌ಕರ್ ಕಲಾಶಾಲೆಯೊಂದಿಗೆ ಹೆಚ್ಚಿನ ಸಂಪರ್ಕವನ್ನು ಇಟ್ಟುಕೊಂಡಿದ್ದರು. ಇದರಿಂದಾಗಿ ಚಿತ್ರಕಲೆಯ ಮೂಲತತ್ವಗಳಾದ ರೇಖೆ, ವರ್ಣ ವಿನ್ಯಾಸ, ಆಕಾರ, ಆಕೃತಿ, ತಂತ್ರಗಳ ಕುರಿತು ಆಳವಾದ ಅಧ್ಯಯನ ಮಾಡಲು ಅವಕಾಶ ಒದಗಿಸಿತು. ಆ ಕಲಾಶಾಲೆಯ ಕಲಾಕೃತಿಗಳನ್ನು ಪದೇ ಪದೇ ನೋಡುವುದರಿಂದಲೂ, ಕಲೆಯ ಕುರಿತಾದ ಹೊಸ ಹೊಸ ವಿಚಾರಗಳನ್ನು ತಿಳಿದುಕೊಳ್ಳಲು ಅನುಕೂಲವಾಯಿತು. ಅಲ್ಲಿಯ ರೇಖಾಚಿತ್ರಗಳು, ಜಲವರ್ಣ ಚಿತ್ರಗಳು, ತೈಲವರ್ಣಚಿತ್ರಗಳು ಅಲ್ಲದೇ ವಿವಿಧ ಮಾಧ್ಯಮಗಳ ಕುರಿತು ಅರಿತು ಕೊಳ್ಳಲು ಒಳ್ಳೆಯ ಅವಕಾಶ ದೊರೆಯಿತು.

ಕಲಾಶಿಕ್ಷಣಕ್ಕೆ ಪ್ರೇರಣೆ:

ನಮ್ಮಲ್ಲಿರುವ ಕಲೆಯು ನಮ್ಮೊಡನೆಯೇ ಅವಸಾನವಾಗಬಾರದು ಅದನ್ನು ನಾಲ್ಕಾರು ಜನರಿಗೆ ಹೇಳಿಕೊಡಬೇಕು ಎಂಬ ಹೆಬ್ಬಯಕೆಯೊಂದಿಗೆ, ಕೆ.ಬಿ.ಕುಲಕರ್ಣಿ ಅವರ ಮನೋಭಿಲಾಷೆಯಂತೆ ಚಿತ್ರಕಲಾ ಶಾಲೆಯ ಮಿತ್ರರಾದ ಆರ್.ಬಿ.ಪವಾರ್ ಮತ್ತು ಅಜಗಾಂವ್‌ಕರ್ ಚಿತ್ರಕಲಾ ಶಿಕ್ಷಕರೊಂದಿಗೆ ಸೇರಿಕೊಂಡು 1942ರಲ್ಲಿ “ಕಲಾನಿಕೇತನ” ಎಂಬ ಚಿತ್ರಕಲಾ ಶಾಲೆಯನ್ನು ಪ್ರಾರಂಭಿಸಿದರು. ಇದನ್ನು 1948ರವರೆಗೆ ಮುಂದುವರೆಸಿಕೊಂಡು ಬಂದರು, ನಂತರ ಕಾರಣಾಂತರಗಳಿಂದಾಗಿ ಈ ಕಲಾಶಾಲೆಯನ್ನು ಬಿಟ್ಟು ಮುಂದೆ ಸ್ವತಂತ್ರವಾಗಿ “ಚಿತ್ರಕಲಾಮಂದಿರ” ಕಲಾಸಂಸ್ಥೆಯನ್ನು ಸ್ಥಾಪಿಸಿದರು.

ಸಮಕಾಲೀನ ಕಲಾಶಾಲೆಗಳು:

ಸರಿಯಾದ ಅಸ್ತಿತ್ವವೇ ಇಲ್ಲದ ಕಲಾಶಿಕ್ಷಣವಿದಾಗಿತ್ತು. ಯಾಕೆಂದರೆ, ಆಸಂದರ್ಭದಲ್ಲಿ ಕಲಾಶಾಲೆಯ ನವೀಕರಣ ಅನುಮತಿಗಾಗಿ ವರ್ಷ ವರ್ಷವೂ ಕಾಯಬೇಕಾಗಿತ್ತು. ರಾಜ್ಯದಲ್ಲಿ ಕಲಾಶಾಲೆಗಳ ಸಂಖೆಯೂ ಕಡಿಮೆ ಅವುಗಳ

ಅನುಮತಿ ನೆರೆ ರಾಜ್ಯವಾದ ಮಹಾರಾಷ್ಟ್ರದ ರಾಜಧಾನಿ ಮುಂಬೈ ಕೇಂದ್ರವಾಗಿತ್ತು. ಭಾರತದ ಇತರೆಡೆ ಅಂದರೆ ಮದ್ರಾಸ್ ಸರಕಾರಿ ಕಲಾಶಾಲೆ ಪ್ರಥಮವಾಗಿ ಪ್ರಾರಂಭವಾಗಿದ್ದು 1854 ಮಾರ್ಚ ತಿಂಗಳಲ್ಲಿ ನಂತರ 1854 ಜೂನ್‌ದಲ್ಲಿ ಸರಕಾರಿ ಕಲಾ ಶಾಲೆ ಕಲ್ಕತ್ತಾದಲ್ಲಿ ಪ್ರಾರಂಭವಾಯಿತು. ಮೂರುವರುಷಗಳ ನಂತರ 1857ರಲ್ಲಿ ಮುಂಬೈದಲ್ಲಿ ಸರ್.ಜೆ.ಜೆ.ಕಲಾಶಾಲೆ (ಸರ್.ಜೇಮ್‌ಸೇಟ್ ಜೀಜಾಬಾಯಿಯ) ಪ್ರಾರಂಭವಾಯಿತು. ಇವು ಬ್ರಿಟಿಷ್ ನಿರೂಪಣಾ ಕಲಾ ಶಾಲೆಗಳಾಗಿ ಬೆಳೆದು ಬಂದವು ಇವುಗಳಿಗೆ ಪ್ರತಿಸ್ಪರ್ಧಿಯಾಗಿ

ಶಾಂತಿನಿಕೇತನ ಆರ್ಟಸ್ಕೂಲ (ಬೆಂಗಾಲ್ ಆರ್ಟ ಸ್ಕೂಲ್) :

* ಭಾರತೀಯ ಗುರುಕುಲ ಪದ್ಧತಿಯ ಕಲಾಶಾಲೆಯನ್ನು ಡಾ.ರವೀಂದ್ರನಾಥ ಠಾಗೋರ್ ಅವರು ಕಲಕತ್ತಾದ ಸರಕಾರಿ ಕಲಾ ಶಾಲೆ0ಯ ಪ್ರಾಚಾಯರ್ರಾದ ಇ. ಬಿ. ಹ್ಯಾವಲ್ ಅವರ ಪರಿಪೂರ್ಣ ಮಾರ್ಗದರ್ಶನ ಹಾಗೂ ಸಹಕಾರದೊಂದಿಗೆ ಅಭಿನೀಂದ್ರನಾಥ ಠಾಗೋರ್ ಅವರ ನೇತೃತ್ವದಲ್ಲಿ 1920ರಲ್ಲಿ "ಶಾಂತಿನಿಕೇತನದಲ್ಲಿ ಕಲಾಶಾಲೆ"ಯನ್ನು ಪ್ರಾರಂಭಿಸಿದರು.

ನೂತನ ಕಲಾ ಮಂದಿರ ಮುಂಬೈ :

* ಮುಂಬೈದಲ್ಲಿ ಸರ್.____ಜೆ.ಜೆ.ಕಲಾಶಾಲೆಗೆ ಪ್ರತಿಯಾಗಿ "ನೂತನ ಕಲಾಮಂದಿರ"ವನ್ನು ಡಿ.ಜಿ.ಬಡಿಗೇರ್ ಅವರು 1932ರಲ್ಲಿ ಪ್ರಾರಂಭಿಸಿದರು ಮುಂದೆ ಈ ಕಲಾಶಾಲೆಯನ್ನು ದಂಡಾವತಿಮಠ ಅವರ ನೇತೃತ್ವದಲ್ಲಿ ಯಶಸ್ವಿಯಾಗಿ ಮುನ್ನಡಸಿಕೊಂಡು ಬಂದರು.

ಹಾಲಭಾವಿ ಸ್ಕೂಲ ಆಫ್ ಆರ್ಟ, ಧಾರವಾಡ :

ಇವುಗಳ ಪ್ರೇರಣೆಯಿಂದಾಗಿ ರಾಜ್ಯದಲ್ಲಿಯೂ ಕಲಾ ಶಾಲೆಗಳು ಹುಟ್ಟಿಕೊಂಡವು. ಸರ್.ಜೆ.ಜೆ.ಕಲಾಶಾಲೆಯಲ್ಲಿ ಶಿಕ್ಷಣವನ್ನು ಪೂರೈಸಿಕೊಂಡು ಬಂದ ಡಿ.ವ್ಹಿ.ಹಾಲಭಾವಿಯವರು ರಾಜ್ಯದ ಸಾಂಸ್ಕೃತಿಕ ರಾಜಧಾನಿಯೆಂದೇ ಪ್ರಸಿದ್ಧಿ ಪಡೆದ ಧಾರವಾಡದಲ್ಲಿ 1935ರಲ್ಲಿ **"ಸ್ಕೂಲ ಆಫ್ ಆರ್ಟ"** ಪ್ರಾರಂಭಿಸಿದರು. ಆ ಸಂದರ್ಭದಲ್ಲಿ ಈ ಹಾಲಭಾವಿ ಕಲಾ ಶಾಲೆ ರಾಜ್ಯದುದ್ದಗಲಕ್ಕೂ ಇರುವ ಕಲಾವಿದರಿಗೆ ಕಲಾಶಿಕ್ಷಕರಿಗೆ ಪರೀಕ್ಷೆಯ ಕೇಂದ್ರವಾಗಿ ರೂಪುಗೊಂಡಿತು ರಾಜ್ಯದ ಬಹುತೇಕ ಕಲಾವಿದರಿಗೆ ಹಾಗೂ ಕಲಾಶಿಕ್ಷಕರಿಗೆ ಮುಂಬೈದ ಸರ್. ಜೆ.ಜೆ. ಕಲಾಶಾಲೆಯೊಂದಿಗೆ ಸಂಪರ್ಕ ಸೇತುವೆಯಾಗಿ ಕಾರ್ಯ ನಿರ್ವಹಿಸುತ್ತಿತ್ತು. ಬೆಳಗಾಂವ್‌ದಲ್ಲಿ ಕೆ.ಬಿ.ಕುಲಕರ್ಣಿ ಅವರು ಮಿತ್ರರಾದ ಆರ್. ಬಿ. ಪವಾರ್ ಮತ್ತು ಅಜಗಾಂವ್ಕರ್ ಅವರೊಂದಿಗೆ ಸೇರಿಕೊಂಡು 1942ರಲ್ಲಿ **"ಕಲಾನಿಕೇತನ"** ಎಂಬ ಚಿತ್ರಕಲಾ ಶಾಲೆಯನ್ನು ಪ್ರಾರಂಭಿಸಿದರು. ಆನಂತರ ಗದಗದಲ್ಲಿ ಟಿ.ಪಿ.ಅಕ್ಕಿ ಅವರು 1947ರಲ್ಲಿ ತಮ್ಮದೇ ಆದ **"ವಿಜಯ ಕಲಾಮಂದಿರ"**ವನ್ನು ಪ್ರಾರಂಭಿಸಿದರು. ಉತ್ತರ ಕರ್ನಾಟಕದ ಪ್ರಮುಖ ವಾಣಿಜ್ಯನಗರವಾದ ಹುಬ್ಬಳ್ಳಿಯಲ್ಲಿ ಡಾ.ಎಂ.ವ್ಹಿ.ಮಿಣಜಗಿ ಅವರು 1951ರಲ್ಲಿ **"ಕರ್ನಾಟಕ ಆರ್ಟ್ಸ ಎಜ್ಯುಕೇಷನ್"**

ಎಂಬ ಸಂಸ್ಥೆಯ ಮೂಲಕ ಕಲಾಶಾಲೆಯನ್ನು ಆರಂಭಿಸಿದರು ಇದೇ ಸಂದರ್ಭದಲ್ಲಿ ಕೆ. ಬಿ. ಕುಲಕರ್ಣಿ ಅವರು 1951ರಲ್ಲಿ ಗಡಿನಾಡು ಬೆಳಗಾವಿಯಲ್ಲಿ ಸ್ವತಂತ್ರ **"ಚಿತ್ರಕಲಾ ಮಂದಿರವನ್ನು"** ಪ್ರಾರಂಭಿಸಿದರು. ಈ ಸಂಸ್ಥೆಯಿಂದ ನೂರಾರು ವಿದ್ಯಾರ್ಥಿಗಳು ಹೊರಬಂದಿದ್ದು ಈ ವಿದ್ಯಾರ್ಥಿಗಳಿಗೆ ಕಲೆಯ ಕುರಿತು ವಿಚಾರ ಸಂಕಿರಣ ರಸಗ್ರಹಣ, ಕಲಾಕೃತಿಗಳರಚನೆ, ಪ್ರಾತ್ಯಕ್ಷಿಕೆ ಹೀಗೆ ಹತ್ತಾರು ಯೋಜನೆಗಳೊಂದಿಗೆ ಕಲಾವಿದರನ್ನಾಗಿ ಇಲ್ಲವೇ ಕಲಾಶಿಕ್ಷಕರನ್ನಾಗಿ ಬೆಳೆಸುತ್ತ "ಚಿತ್ರಕಲಾಮಂದಿರ"ವನ್ನು 1977ರವರೆಗೆ ಅಂದರೆ ಸುಮಾರು 26 ವರುಷಗಳ ಕಾಲ ಯಶಸ್ವಿಯಾಗಿ ನಡೆಸಿಕೊಂಡು ಬಂದರು, ಈ ಕಲಾಶಾಲೆಯ ಸಂಸ್ಥಾಪಕರಾಗಿ ಪ್ರಾಚಾರ್ಯರಾಗಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸಿ ಹಲವಾರು ವಿದ್ಯಾರ್ಥಿಗಳು ರಾಜ್ಯ ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಿಕೊಂಡು ಬೆಳೆಯುವಂತೆ ಪ್ರೋತ್ಸಾಹಿಸುತ್ತಿದ್ದರು.

ಕೃಷ್ಣರಾವ್‌ರವರಿಗೆ ವೃತ್ತಿ ಮತ್ಸರವಿರಲಿಲ್ಲ ಇವರು ಸಹ ಕಲಾವಿದರನ್ನು ಗುರ್ತಿಸುವ, ಗೌರವಿಸುವ, ಸದ್ಗುಣವಿತ್ತು ಹಾಗೆಯೇ ವಿದ್ಯಾರ್ಥಿಗಳಿಗಂತೂ ಅವರು ಗುರುವಿನಂತೆ, ಸ್ನೇಹಿತರಂತೆ ಸಂದರ್ಭೋಚಿತವಾಗಿ ವರ್ತಿಸುವ ವಿಶೇಷ ಗುಣವಿದ್ದಿತು. ಹೊರಗೆ ಭೂ ದೃಶ್ಯ ಬರೆಯಲು ವಿದ್ಯಾರ್ಥಿಗಳನ್ನು ಕರೆದೊಯಿತ್ತಿದ್ದರು. ಈ ಸಂದರ್ಭದಲ್ಲಿ ತಮ್ಮ ಸ್ವಂತ ಹಣದಿಂದ ಬೆಳಗಿನ ಉಪಹಾರ ಕೊಡಿಸುತ್ತಿದ್ದರು ಅವರಿಗೆ ಬೇಕಾದ ಪೇಪರ, ಬಣ್ಣ, ಬ್ರೆಷ್ ತಾವೇ ನೀಡುತ್ತಿದ್ದರು. ಕೆಲ ಬಡವಿದ್ಯಾರ್ಥಿಗಳಿಗೆ ಊಟದ ವ್ಯವಸ್ಥೆಯನ್ನೂ ಮಾಡುತ್ತಿದ್ದರು. ತಮ್ಮ ವೈಯಕ್ತಿಕ ತೊಂದರೆಗಳನ್ನು ಬದಿಗೊತ್ತಿ ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿದ್ದರು.

ಇವರ ಶಿಷ್ಯ ಸಮೂಹದೊಡ್ಡದು. ಅದರಲ್ಲಿ ಕೆಲವರು ರಾಜ್ಯ ರಾಷ್ಟ್ರಮಟ್ಟದಲ್ಲಿ ಹೆಸರುಗಳಿಸಿರುವರು, ಸರ್ಕಾರದ ವಿವಿಧ ಹುದ್ದೆಗಳಲ್ಲಿರುವವರು, ಮಹಾರಾಷ್ಟ್ರ ಹಾಗೂ ಕರ್ನಾಟಕದ ಕಲಾವಲಯದಲ್ಲಿ ತಮ್ಮದೇ ಆದ ವಿಶಿಷ್ಟ ಮಟ್ಟದಲ್ಲಿ ಗುರುತಿಸಿಕೊಂಡಿರುವರು ಪ್ರಮುಖವಾಗಿ ಬಿ.ಆರ್.ಕುಲಕರ್ಣಿ, ಜಾನ್ ಫರ್ನಾಂಡೀಸ್, ಮಾರುತಿ ಪಾಟೀಲ ಹೀಗೆ ಪ್ರತಿಭಾವಂತ ವಿದ್ಯಾರ್ಥಿಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

ಸೇಂಟ್‌ಪಾಲ್ ಶಾಲೆಯಲ್ಲಿ ಕೆಲಸಮಾಡಿಕೊಂಡು ಕಲಾ ವಿದ್ಯಾರ್ಥಿಗಳನ್ನು ಒಂದೆಡೆ ಸೇರಿಸಿಕೊಂಡು ಜಲವರ್ಣ ತೈಲವರ್ಣದಲ್ಲಿ ಚಿತ್ರಗಳನ್ನು ಬರೆಯಲಾರಂಭಿಸಿದರು ಈ ಕಲಾಶಾಲೆಯ ವಾತಾವರಣವೂ ಮುಕ್ತ ಹಾಗೂ ಪೂರಕವಾಗಿತ್ತು. ಕಲೆಯ ಕುರಿತಾದ ನಿರಂತರ ಚರ್ಚೆ ಸಂವಾದ, ಹರಟೆಗಳು ನಡೆಯುತ್ತಿದ್ದವು. ರೇಖೆಗಳ ಮಹತ್ವದ ಕುರಿತು ತಿಳುವಳಿಕೆ ನೀಡುವುದು. ಕಲಾವಿದನಾದವನು ರೇಖೆ ಮತ್ತು ಹೊರರೇಖೆಗಳ ಕುರಿತು ಅಭ್ಯಾಸ ಮಾಡುವದು ಅನಿವಾರ್ಯವೆಂದು ಹೇಳುತ್ತಿದ್ದರು. ದಿನನಿತ್ಯ ಅವರು ಸುಮಾರು ಐದರಿಂದ ಆರು ಘಂಟೆಗಳ ಕಾಲ ಅವರು ಸ್ಕೆಚ್ ಮಾಡುತ್ತಿದ್ದರು. ವಿದ್ಯಾರ್ಥಿಗಳಿಗೂ

ಸಹ ಸ್ಕೆಚ್ ಮಾಡುವಂತೆ ಪ್ರೇರೇಪಿಸುತ್ತಿದ್ದರು. ಕಲೆಯಲ್ಲಿ ನೀತಿ ನಿಯಮಗಳನ್ನು ಕಡೆಗಣಿಸುವುದು ತಪ್ಪೆಂದು ಭಾವಿಸಿದ್ದರು. ಹೀಗೆ ನಿರಂತರ ಅಧ್ಯಯನದಲ್ಲಿ ತೊಡಗಿರುವ ಇವರಿಗೆ ಉದ್ಯೋಗದಲ್ಲಿರುವಾಗ ಅನೇಕ ತೊಂದರೆಗಳುಂಟಾಗುತ್ತಿದ್ದವು ಆರ್ಥಿಕ ತೊಂದರೆಯೂ ಇತ್ತು. ಕಲಾಕೃತಿ ರಚಿಸಲು ಬೇಕಾದ ಸಾಮಗ್ರಿಗಳೂ ಸಿಗುತ್ತಿರಲಿಲ್ಲ. ಆದರೂ, ಅವರ ಸಾಧನೆಯಲ್ಲಿ ಸ್ವಲ್ಪವೂ ಅಡ್ಡಿ ಉಂಟಾಗದಂತೆ ನೋಡಿಕೊಂಡರು ಅನೇಕ ವಿದ್ಯಾರ್ಥಿಗಳು ಅವರೊಂದಿಗೆ ಇರುವಾಗ ರೂಪದರ್ಶಿ(?)ಗಳ ಕೊರತೆ ಉಂಟಾಗಲಿಲ್ಲ ವಿದ್ಯಾರ್ಥಿಗಳನ್ನೇ ರೂಪದರ್ಶಿಗಳನ್ನಾಗಿ ಕೂಡ್ರಿಸಿಕೊಂಡು ಚಿತ್ರ ಬರೆಯುತ್ತಿದ್ದರು.

ವ್ಯವಸ್ಥಿತವಾಗಿ ಅಭ್ಯಾಸ ಮಾಡುವ ಅವಕಾಶಗಳು ಸಿಗದಿದ್ದರೂ, ಹಲ್ದನ್‌ಕರ್ ಅವರ ಕಲಾಶಾಲೆಯಲ್ಲಿ ಅಭ್ಯಾಸಮಾಡುವ ಅವಕಾಶ ಸಿಕ್ಕಿತು. ಪತ್ರಿಕೆಗಳಲ್ಲಿ ಮಾಸಪತ್ರಿಕೆಗಳಲ್ಲಿ ಬಂದಿರುವ ಚಿತ್ರಗಳನ್ನು ಪುನ: ಚಿತ್ರಿಸುವು (ನಕಲು ಮಾಡುವು)ದು ಅವರ ಹವ್ಯಾಸವಾಗಿತ್ತು. ರಸ್ತೆ ಬದಿಗೆ ಕುಳಿತು ವ್ಯಾಪಾರ ಮಾಡುವವರ, ಕಾಯಿಪಲ್ಲೆ ಮಾರ್ಕೆಟನಲ್ಲಿಯ ಸನ್ನಿವೇಶಗಳನ್ನು ಜನರ ಚಿತ್ರಗಳನ್ನು ಬರೆಯುವ ಹವ್ಯಾಸವನ್ನು ಬೆಳಸಿಕೊಂಡಿದ್ದರು. ಹಾಗೂ ಅಚ್ಚಾದ ಚಿತ್ರಗಳನ್ನು ಸಂಗ್ರಹಿಸುವುದು ಅವರ ಮುಖ್ಯ ಹವ್ಯಾಸವಾಗಿತ್ತು, ವಾಚನವಂತೂ ಅದ್ಭುತವಾಗಿತ್ತು ಇಂಗ್ಲೀಷ ಸಾಹಿತ್ಯದ ಬಹುತೇಕ ಎಲ್ಲ ಲಭ್ಯವಿರುವ ಗ್ರಂಥಗಳನ್ನು ಓದುವುದು ಇನ್ನೊಂದು ಹವ್ಯಾಸವಾಗಿರುವುದರೊಂದಿಗೆ ಇಂಗ್ಲೀಷ್ ಚಿತ್ರ (ಸಿನೇಮಾ) ಗಳನ್ನು ನೋಡುವುದು ಹಾಗೂ ಇಂಗ್ಲೀಷ ಪತ್ತೇದಾರಿ ಕಾದಂಬರಿಗಳನ್ನು ಓದುವುದರಲ್ಲಿ ವಿಶೇಷ ಆಸಕ್ತಿಯನ್ನು ಹೊಂದಿದ್ದರು ವ್ಯಾಪಕ ಅಧ್ಯಯನದಿಂದ ಅವರ ಮಾತುಗಳು ತೂಕಬದ್ಧವಾಗಿದ್ದು ಏನೇ ಭಿನ್ನಾಭಿಪ್ರಾಯಗಳು ಬಂದಾಗ ಸಹಜವಾಗಿ ನಕ್ಕು ಸುಮ್ಮನಾಗುತ್ತಿದ್ದರು ಅವರಲ್ಲಿರುವ ತಾಳ್ಮೆ ಸಹನೆ ಹಾಗೂ ಮೃದು ಸ್ವಭಾವಗಳನ್ನು ಮೈಗೂಢಿಸಿಕೊಂಡಿರುವುದನ್ನು ಕಾಣಬಹುದಾಗಿತ್ತು.

ಮುಂಬೈಯ ಸರ್.ಜೆ.ಜೆ.ಕಲಾಶಾಲೆ ಪಾಶ್ಚಾತ್ಯ ಸಂಸ್ಕೃತಿ ಹಾಗೂ ಕಲೆಯಲ್ಲಿಯ ತಂತ್ರಗಳನ್ನು ಪ್ರಮುಖವಾಗಿಟ್ಟುಕೊಂಡು ಅಧ್ಯಯನ ಮಾಡಿಸುತ್ತಿದ್ದು ಸಹಜವಾಗಿಯೇ ಅಲ್ಲಿಯ ವಿದ್ಯಾರ್ಥಿಗಳು ಪಾಶ್ಚಾತ್ಯ ಸಂಸ್ಕೃತಿಯತ್ತ ವಾಲುತ್ತಿದ್ದರು ಕೃಷ್ಣರಾವ್ ಕುಲಕರ್ಣಿ ಅವರು ಇದಕ್ಕೆ ಹೊರತಾಗಿರಲಿಲ್ಲ ಕಲೆಯನ್ನು ಕುರಿತು ಅಧ್ಯಯನ ಮಾಡುವಾಗ ಕಲಾವಿದರಾದ ರಾಫೆಲ್, ರುಬೆನ್ಸ್, ರೆಂಬ್ರಾಂಟ್, ಅಗಸ್ಟಸ್, ಜಾನ್ ಸಾರ್ಜಂಟ್, ರೂಸೋ ಇವರು ಅವರಿಗೆ ಪ್ರಿಯಕಲಾವಿದರಾಗಿದ್ದರು ಇವರನ್ನು ಕುರಿತು ಗಂಟೆಗಟ್ಟಲೇ ಮಾತನಾಡುತ್ತಿದ್ದರು "ಮೈಕಲೆಂಜಿಲೋ ಹಾಗೂ ಲಿಯೋನಾರ್ಡೋ-ದ-ವಿಂಚಿ" ಅವರನ್ನು ದೇವರಂತೆ ಪೂಜಿಸುತ್ತಿದ್ದೆವೆಂದೂ ಹೇಳುತ್ತಿದ್ದರು.

ಕಲಾವಿದನಾದವನಿಗೆ ಕಲ್ಪನೆ, ಪ್ರತಿಭೆ, ಬುದ್ಧಿಮತ್ತೆ, ಒತ್ತಡ ಮತ್ತು ಪ್ರಾಮಾಣಿಕತೆ ಕಲೆಯನ್ನು ಕರಗತಮಾಡಿಕೊಳ್ಳುವುದಕ್ಕೆ ಅನಿವಾರ್ಯವೆಂದೇ

ಹೇಳುತ್ತಿದ್ದರು. ಕೇವಲ ಭಾವನೆಯ ಅಭಿವ್ಯಕ್ತಿಯೇ ಕಲಾಕೃತಿಯನ್ನು ನಿರ್ಮಿಸಲು ಸಾಲದು "ಕಲೆ ಭಾವನೆಗಳ ಅಭಿವ್ಯಕ್ತಿಯ ಜೊತೆಗೆ ಆಂತರಿಕ ಸತ್ವವನ್ನು ಬಿಂಬಿಸುವಂತಿರಬೇಕು. ಆಂತರಿಕ ಸತ್ವ ಏನೆಂದು ತಿಳಿದುಕೊಳ್ಳುವುದು ಪ್ರತಿಯೊಬ್ಬ ಕಲಾವಿದನ ಕರ್ತವ್ಯವಾಗಿರುತ್ತದೆ ಕೇವಲ ದೈವೀ ಅಥವಾ ಪ್ರೇರಣೆ ಎಂದು ಹೇಳಿದರೆ ಸಾಲದು ಸತತ ಪ್ರಯತ್ನ ಅಗತ್ಯವಾಗಿರುತ್ತದೆ" ಎನ್ನುತ್ತಿದ್ದರು.

ಅವರು ಕೊನೆ ಹಂತದಲ್ಲಿ ಕೊಲ್ಹಾಪೂರ ಜಿಲ್ಲೆಯ ಶಿನೋಳ್ಳಿಯ ಜೆ.ಎನ್. ಬಂಢಾರಿ ಸ್ಕೂಲ್ ಆಫ್ ಆರ್ಟದ ಪ್ರಾಚಾರ್ಯರಾಗಿ ಕಾರ್ಯ ನಿರ್ವಹಿಸಿದರು. ಕರ್ನಾಟಕ ಕಲಾಶಿಕ್ಷಣ ಬೋರ್ಡಿನ ನಿರ್ದೇಶಕ ಮಂಡಳಿಯ ಸದಸ್ಯರಾಗಿ ಹಾಗೂ ಕರ್ನಾಟಕ ಲಲಿತಕಲಾ ಅಕಾಡೆಮಿಯ ಸದಸ್ಯರಾಗಿ ಸೇವೆ ಸಲ್ಲಿಸಿರುವರು.

ಅತ್ಯಂತ ಸರಳ ಜೀವನ ನಡೆಸುವುದು ಅವರ ಗುರಿಯಾಗಿತ್ತು. ತೋರಿಕೆಯ ಪ್ರಚಾರವಾಗಲಿ, ಅಹಂಕಾರವಾಗಲಿ, ತಾವು ಹೇಳಿದ್ದೇ ನಿಜವೆಂಬ ಹಟಮಾರಿತನವಾಗಲಿ ಇಂಥವು ಯಾವುದೂ ಅವರ ಹತ್ತಿರ ಸುಳಿಯಲಿಲ್ಲ. ಪ್ರಬುದ್ಧರೇ ಇರಲಿ, ಚಿಕ್ಕವರೇ ಇರಲಿ ಎಲ್ಲರೊಂದಿಗೆ ಆತ್ಮೀಯತೆಯಿಂದ ನೋಡುತ್ತಿದ್ದರು.

ನವ್ಯ ಕಲಾವಿದ ಮತ್ತು ಕಲಾಕೃತಿಗಳು ಹಾಗೂ ಕಲಾಶೈಲಿ, ಕುರಿತು ಅವರ ಅಭಿಪ್ರಾಯಗಳು:

ಸಾಂಪ್ರದಾಯಿಕ ಹಾಗೂ ಆಧುನಿಕ ಚಿತ್ರಕಲಾ ಶೈಲಿಯ ಕಲಾಕೃತಿಗಳನ್ನು ನೋಡುವುದರೊಂದಿಗೆ ಅವುಗಳ ಕುರಿತು ಅಧ್ಯಯನ ಮಾಡಿದರು. ಕೆ.ಬಿ.ಕುಲಕರ್ಣಿ ಅವರು ತಮ್ಮದೇ ಆದ ಸ್ವತಂತ್ರ ಕಲಾ ಶೈಲಿಯನ್ನು ಹುಟ್ಟು ಹಾಕಿದರು. ಸಾಂಪ್ರದಾಯಿಕ ಕಲಾಶೈಲಿಗಳಾದ ಮೋಘಲ್ ಮತ್ತು ರಜಪೂತ ಕಲಾಶೈಲಿಗಳಿಂದ ಪ್ರೇರಣೆ ಹೊಂದಿದ್ದರೂ ಪಾಶ್ಚಾತ್ಯ ಕಲಾವಿದರಾದ ಲಿಯೋನಾರ್ಡೋ-ದ-ವಿಂಚಿ, ರುಬೆನ್ಸ್, ರೆಂಬ್ರಾಂಟ್, ರಾಫೇಲ್ ಹಾಗೂ ಮೈಕಲೆಂಜಿಲೋ ಅವರ ಕಲಾಕೃತಿಗಳಲ್ಲಿ ಕಾಣಸಿಗುವ ರೇಖೆಗಳಲ್ಲಿಯ ಸೂಕ್ಷ್ಮತೆ, ರಭಸತೆ ಆಕಾರ ಮತ್ತು ವಿನ್ಯಾಸಗಳ ಕುರಿತು ಅಧ್ಯಯನಮಾಡುತ್ತಿದ್ದರು, ಆಕರ್ಷಕ ಬಣ್ಣಗಳ ಬಳಕೆ, ಮೂರು ಆಯಾಮಗಳಲ್ಲಿ ತೋರಿಸಲ್ಪಡುವ ಚಿತ್ರಗಳು ಕಲಾಕೃತಿಗಳಲ್ಲಿಯ ವ್ಯಕ್ತಿಗಳ ಪ್ರಮಾಣಬದ್ಧತೆ, ಭಾವನೆಗಳು ಹಾಗೂ ವಿವಿಧ ಬಂಗಿಗಳ ಕುರಿತು ಅಧ್ಯಯನ ಮಾಡಿದ್ದರು ಎಂಬುದು ತಿಳಿದುಬರುತ್ತದೆ. ಅಂತೆಯೇ ಅವರ ನಿಸರ್ಗ ಚಿತ್ರಗಳು, ರೇಖಾಚಿತ್ರಗಳು, ವ್ಯಕ್ತಿಚಿತ್ರಗಳು, ಸಂಯೋಜನಾ ಚಿತ್ರಗಳು, ಪೆನ್ ಮತ್ತು ಇಂಕ್, ಚಾರ್ಕೋಲ್, ಜಲವರ್ಣ, ತೈಲವರ್ಣ ಹೀಗೆ ವಿವಿಧ ಮಾಧ್ಯಮಗಳಲ್ಲಿ ಅದ್ಭುತವಾಗಿ ಕಲಾಕೃತಿಗಳು ಮೂಡಿಬಂದಿವೆ.

ಕಲಾವಿದನಲ್ಲಿ ಪ್ರತಿಭೆ, ಕಲ್ಪನಾಶಕ್ತಿ, ಬುದ್ಧಿಶಕ್ತಿ ಮತ್ತು ಪ್ರಾಮಾಣಿಕತೆಯು ಇರಬೇಕು ಹಾಗೂ ಇವುಗಳನ್ನು ಕರಗತ ಮಾಡಿಕೊಳ್ಳಬೇಕು" ಈ ಅಂಶಗಳು

ಅನಿವಾರ್ಯವೆಂದು ಹೇಳುತ್ತಿದ್ದರು ಕೇವಲ ಭಾವನೆ ಮಾತ್ರ ಕಲಾವಿದನಿಗಿದ್ದರೆ ಸಾಲದು ಎನ್ನುತ್ತಿದ್ದರು ಕಲೆಯು ಭಾವನೆಗಳ ಅಭಿವ್ಯಕ್ತಿಯ ಜೊತೆಗೆ ಅದರ ಆಂತರಿಕ ಸತ್ವವನ್ನು ಬಿಂಬಿಸುವಂತಿರಬೇಕು, ಈ ಕುರಿತು ಕಲಾವಿದ ಪ್ರಯತ್ನ ಪಡಬೇಕು. ಅದನ್ನು ಬಿಟ್ಟು ಕೇವಲ ದೈವೀ ಪ್ರೇರಣೆ ಬೇಕು ಎಂದು ಹೇಳುತ್ತ ಕುಳಿತರೆ ಸಾಲದು ಎಂದು ಕಿವಿಮಾತನ್ನು ಕಲಾವಿದರಿಗೆ ಹೇಳುತ್ತಿದ್ದರು.

ಚಿತ್ರಕಲೆ ಒಂದು ಸಾಹಿತ್ಯಾತ್ಮಕ ಚಟುವಟಿಕೆ ಇದ್ದಂತೆ. ಕಲೆಯಲ್ಲಿ ಪಾಶ್ಚಿಮಾತ್ಯ ಹಾಗೂ ಪೌರಾತ್ಯವೆಂಬುವ ಬೇಧ ಭಾವವನ್ನು ವಿಂಗಡಿಸುವುದು ತಪ್ಪು ಕಲೆ ಕೇವಲ ಕಲೆ ಎಂದಿದ್ದರೆ ಸಾಕು, ಕಲಾವಿದ ತನ್ನ ಆತ್ಮಸಂತೋಷಕ್ಕಾಗಿ ಮತ್ತು ಆತ್ಮಾನ್ವೇಷಣೆಗೆ ಕಲಾಚಟುವಟಿಕೆಯಲ್ಲಿ ತೊಡಗಿರುತ್ತಾನೆ ಕಲೆಯು ಕಾವ್ಯದಂತೆ ಇದ್ದು ಅದರಲ್ಲಿ ಅಡಗಿರುವ ತರಂಗಬದ್ಧತೆ, ಲಯಬದ್ಧತೆ, ಪ್ರಮಾಣಬದ್ಧತೆಯಂತಹ ಗುಣಲಕ್ಷಣಗಳು ಕಲಾಕೃತಿಯಲ್ಲಿ ಇರಲೇಬೇಕು ಎನ್ನುವುದು ಅವರ ವಾದವಾಗಿತ್ತು.

ನಿಸರ್ಗವನ್ನು ಅನುಕರಣಿಮಾಡುವುದು ತಪ್ಪೆಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಆದರೆ ಈ ಮಾತಿನಲ್ಲಿ ಹುರುಳಿಲ್ಲ ಎನ್ನುವ ಕೆ.ಬಿ.ಕುಲಕರ್ಣಿ ಅವರು ಅನುಕರಣಿ ಅಪರಾಧವಲ್ಲ! ಆದರೆ, ಅಂತಹ ಅನುಕರಣಿಯಲ್ಲಿಯೂ ಹೊಸದೇನೆಂದು ತೋರಿಸುವುದು ಕಲಾಕೃತಿಯ ಮಟ್ಟಕ್ಕೇರುವುದಿಲ್ಲವೆಂಬ ಭಾವನೆಯೂ ಇದೆ? ಇದೂ ಕೂಡಾ ಸಮರ್ಪಕವಾದ ವಾದವಲ್ಲವೆಂದು ಹೇಳುವ ಕೆ.ಬಿ.ಕುಲಕರ್ಣಿ ಅವರು ಅಮೂರ್ತ ಚಿತ್ರಕಲೆಯನ್ನು ಕುರಿತು ಅವರ ವಿಚಾರಗಳು ಸ್ಪಷ್ಟವಾಗಿದ್ದವು. ಅಮೂರ್ತ ಚಿತ್ರಕಲೆ ಕಲಾವಿದನನ್ನು ಹಗುರಗೊಳಿಸುತ್ತದೆ, ಬಂಧನದಿಂದ ಮುಕ್ತಗೊಳಿಸುತ್ತದೆ, ಸ್ವಂತಿಕೆಯನ್ನು ಪ್ರದರ್ಶಿಸಲು ಅವಕಾಶ ಮಾಡಿಕೊಡುತ್ತದೆ. ನಿಜ! ಆದರೆ ಅನೇಕ ಸಂದರ್ಭಗಳಲ್ಲಿ ಅರ್ಥಹೀನವಾಗುವ ಅಪಾಯಕ್ಕೂ ಬಲಿಯಾಗುತ್ತದೆ ತುಂಬಾ ಎಚ್ಚರದಿಂದಲೇ ಗಮನಿಸಬೇಕು. ವಾಸ್ತವವಾದಿ ಚಿತ್ರಗಳೂ, ಅಮೂರ್ತ ಚಿತ್ರಗಳು ನೀಡುವ ಸಂತೋಷವನ್ನು ನೀಡಬಲ್ಲವು ಈ ಸಂದರ್ಭದಲ್ಲಿ ಅವರು ಮೈಕಲೆಂಜಿಲೋ ಅವರ "Creation of Man" ಎಂಬ ಚಿತ್ರವನ್ನು ಉದಾಹರಣೆ ಎಂದು ಹೇಳುತ್ತಾರೆ. ಈ ಕಲಾಕೃತಿಯಲ್ಲಿ ಹೊರಹೊಮ್ಮುವ ಅಮೂರ್ತ ಸಂವೇದನೆ ಕಡಿಮೆಯೇನಲ್ಲ ಕಲೆಯು ಜಗತ್ತಿನಲ್ಲಿ ಇತ್ತೀಚಿನ ಮನೋಧರ್ಮ ರೂಪದರ್ಶಿಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುತ್ತಿಲ್ಲ ಈ ಕುರಿತು ನನ್ನ ವಿರೋಧವಿದೆ ಎನ್ನುವ ಕೆ.ಬಿ.ಕುಲಕರ್ಣಿ ಅವರು

ಪಿಕಾಸೋನ ಬಗ್ಗೆ ಗೌರವವಿದೆ. ಆದರೆ, ಅವನ ಕಲೆ ನನಗೆ ತಿಳಿಯದು ಎಂದು ಹೇಳುತ್ತಿದ್ದರು. Restoration ಕುರಿತು ಕೆ.ಬಿ.ಕುಲಕರ್ಣಿ ಅವರ ಅಭಿಪ್ರಾಯ ಅಷ್ಟೊಂದು ಚೆನ್ನಾಗಿರಲಿಲ್ಲವೆನಿಸುತ್ತದೆ. ಯಾಕೆಂದರೆ ಅವರು ಕಲೆಯ ಕುರಿತು ತಮ್ಮ ಅಭಿಪ್ರಾಯವನ್ನು ಮುಂದುವರೆಸುತ್ತಾ ತರ್ಕಹೀನ ರಚನೆ ಕಲಾಕೃತಿ ಆಗಬಹುದೆ? ಎಂಬ ಪ್ರಶ್ನೆ ಅವರನ್ನು ಕಾಡುತ್ತಿತ್ತು ಕಲೆಗೆ ಯಾವ ನಿಯಮವೂ

ಕಡ್ಡಾಯವಾಗಿ ಅನ್ವಯಿಸುವುದಿಲ್ಲವೆಂದು ಅವರ ಅಭಿಪ್ರಾಯವಾಗಿತ್ತು. ಸತ್ಯ ಮತ್ತು ಪ್ರಾಮಾಣಿಕತೆ ಎರಡೇ ಕಲೆಗೆ ಅನಿವಾರ್ಯವೆಂದು ಹೇಳುತ್ತಿದ್ದರು ಸತ್ಯ ಮತ್ತು ಸೌಂದರ್ಯ ಇವು ಕಲೆಗೆ ಮಾರ್ಗದರ್ಶಿ ಸೂತ್ರಗಳೆಂದು ಅವರು ನಂಬಿದ್ದರು.

ಕಲೆಯನ್ನೇ ಉಸಿರಾಗಿ ಬದುಕಿಬಾಳುವ ಕೆ.ಬಿ.ಕುಲಕರ್ಣಿ ಅವರು ಕಲೆಯನ್ನು ಇಂದಿನವರೆಗೂ ಅಂದರೆ ತಮ್ಮ ಅಂತಿಮ ದಿನದ ವರೆಗೂ ವಿದ್ಯಾರ್ಥಿಗಳಲ್ಲಿ ಹಂಚಿಕೊಂಡರು ಹಾಗೂ "ಕಲೆಯೆಂದರೆ ಅದೊಂದು ಜೀವಿತದ ಅರಿವನ್ನು ಹಿಗ್ಗಿಸುವ ಹೊಸ ಕಾಣಿಕೆ ಬದುಕನ್ನು ಸಮೃದ್ಧ ಸಾರ್ಥಕವಾಗಿಸುವ ಸೃಷ್ಟಿಶೀಲ, ಸತ್ವಪೂರ್ಣ, ಚಟುವಟಿಕೆಯಾಗಿ ಉಳಿಯುವದು" ಎನ್ನುವ ಇವರು ಅದರಲ್ಲಿಯ ನಿಗೂಢತೆ ಕಾಯ್ದುಕೊಂಡು ಪೌರ್ವಾತ್ಯ, ಪಾಶ್ಚಿಮಾತ್ಯ, ನವ್ಯ, ಹಳೆಯ, ಕಲೆಗಳೆಂಬ ವರ್ಗೀಕರಣದ ಕುರಿತು ನಾನು ಅಷ್ಟೊಂದು ತಲೆಕೆಡಸಿಕೊಂಡಿಲ್ಲವೆನ್ನುವ ಕೃಷ್ಣರಾವ್.ಬಿ.ಕುಲಕರ್ಣಿ ಅವರ ಅಭಿಪ್ರಾಯಗಳು ಭಾವೀ ಕವಿಗಳಿಗೆ ಕಿವಿಮಾತು ಹೇಳಿದ ವರಕವಿ ದ.ರಾ.ಬೇಂದ್ರೆ ಅವರು "ಹೃದಯದೇಗುಲದಲ್ಲಿ ಒಲವಲೆಕ್ಕಣಿಕೆಮಾಡಿ ಬರೆಯಲೋ ಹುಡುಗ ನಿನ್ನ ಒಕ್ಕಣಿಕೆ" ಎಂಬ ಪಿಸುನುಡಿಯ ತದ್ವತ್ ರೂಪದಂತಿದೆ ಕೃಷ್ಣರಾವ್.ಬಿ.ಕುಲಕರ್ಣಿ ಅವರ ಹಿತವಚನ

ಸೃಜನಶೀಲ ಕಲೆಯು ಪ್ರಮುಖ ಕಲಾ ಚಟುವಟಿಕೆ ಆಗಿರುವಂತೆ ಚಿತ್ರಕಲಾ ಶಿಕ್ಷಣವೂ ಒಂದು ಗಮನಾರ್ಹವಾದ ಅಂಗವಾಗಿದೆ. ನಿಸರ್ಗದಲ್ಲಿಯ ವಸ್ತು ಒಂದನ್ನು ತನ್ನ ಕಲ್ಪನೆಯ ಮೂಲಕ ಚಿತ್ರಕಲೆಯಲ್ಲಿ ಪ್ರತಿಬಿಂಬಿಸುವಾಗ ಕಲಾವಿದ ತಾನುಕಂಡ ಸೌಂದರ್ಯವನ್ನು ಜನಸಾಮಾನ್ಯರಿಗೂ ಅರಿವು ಮಾಡಿಕೊಡಲು ಪ್ರಯತ್ನಿಸುತ್ತಾನೆ. ಅಂತೆಯೇ ಕಲಾಶಿಕ್ಷಕನು ಕಲೆಯ ಅರ್ಥ. ವಿವರಣೆ ನೀಡುತ್ತ ಸೌಂದರ್ಯ ಪ್ರಜ್ಞೆಯನ್ನು ಮೂಡಿಸಲು ಪ್ರಯತ್ನಿಸುವನು. ಹೀಗೆ ಕಲಾ ತಪಸ್ವಿಯಾಗಿ ಖ್ಯಾತ ತತ್ವಶಾಸ್ತ್ರಜ್ಞ (Great Philosopher) ರಂತೆ ಕಂಗೊಳಿಸುತ್ತ ಕೆ.ಬಿ.ಕುಲಕರ್ಣಿ ಅವರು ತಮ್ಮ ಬದುಕನ್ನು ರೂಪಿಸಿಕೊಂಡಿದ್ದರು.

ಸಾಮಾಜಿಕ ಒಲವು:

ಕೆ.ಬಿ.ಕುಲಕರ್ಣಿ ಅವರು ತಾತ್ವಿಕ ವಿಚಾರವಂತರೂ ಹೌದು. ಕಲಾಕೃತಿಗಳಲ್ಲಿ ತಮ್ಮ ಈ ವೈಚಾರಿಕ ನಿಲುವುಗಳನ್ನು ಸೂಚಿಸುವುದರೊಂದಿಗೆ ಮಾತಿನ ಮೂಲಕವೂ ತಮ್ಮ ಖಚಿತ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಕಲಾವಿದರಿಗೆ ಸಾಮಾಜಿಕ ಬದ್ಧತೆ ಇರಬೇಕು ಕಲೆ ಮತ್ತು ಕಲಾವಿದನಿಗೆ ಸಾಮಾಜಿಕ ಜವಾಬ್ದಾರಿಯೂ ಇರಬೇಕು. ಕಲಾವಿದ ಮೊದಲು ಮಾನವ ಜೀವಿಯಾಗಿರುವುದರಿಂದ ಅವನು ಅದರೊಂದಿಗೆ ಸಾಗುವ ಜವಾಬ್ದಾರಿಯನ್ನು ತಿರಸ್ಕರಿಸುವುದು ಹೇಗೆ ಸಾಧ್ಯ? ಅಂದರೆ ಕಲಾವಿದನೊಬ್ಬ ತನ್ನ ಕೃತಿಗಳ ಮೂಲಕ ಸಮಾಜವನ್ನು ಬದಲಿಸಬಹುದೆಂದು ಹೇಳುತ್ತಿಲ್ಲ ಆದರೆ ಸಾಮಾಜಿಕ ಕಳಕಳಿಯುಳ್ಳ ಗಂಭೀರ ಕಲಾಕೃತಿಯೊಂದು ನಿಜಕ್ಕೂ ಸಮಾಜವನ್ನು ಚಿಂತನೆಯಲ್ಲಿ

ತೊಡಗಿಸುತ್ತದೆ ಈ ರೀತಿಯ ಗುರಿಯನ್ನು ಕಲಾವಿದ ತನ್ನ ಕೃತಿ ರಚನೆ ಮೂಲಕ ಇಟ್ಟುಕೊಳ್ಳಬೇಕು ಗಂಭೀರವಾದ ಕಲಾವಿದ ಸಾಮಾಜಿಕ ಪ್ರಸ್ತುತತೆ ಮತ್ತು ಕಲಾತ್ಮಕ ಪ್ರಾಮಾಣಿಕತೆಗಳೆರಡನ್ನೂ ಸರಿಯಾದ ರೀತಿಯಲ್ಲಿ ಸಂಲಗ್ನ ಗೊಳಿಸಿ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುತ್ತಾರೆ. ಈಗಿನ ಸಮಕಾಲೀನ ಕಲೆ ಜನರಿಗೆ ಸಂವಹನಗೊಳ್ಳಬೇಕೆಂಬ ಮಹದಾಸೆ ಕಲಾವಿದರಲ್ಲಿ ಇದ್ದರೂ ಅದು ಸಾಮಾನ್ಯ ಜನರನ್ನು ಪೂರ್ಣವಾಗಿ ತಲುಪುತ್ತಿಲ್ಲ. ಇಂದು ಕಲೆಗೆ ಸಮೂಹ ಮಾಧ್ಯಮಗಳು ಸಾಕಷ್ಟು ಗಮನ ನೀಡಿದ್ದು ಕಲೆ ಜನರನ್ನು ತಲುಪಲು ಇದು ತುಂಬಾ ಮುಖ್ಯವಾದ ಸಂಗತಿಯಾಗಿದೆ. ಹಾಗಿದ್ದರೂ ಇದು ಸಾಲದು ಏಕೆಂದರೆ ಈ ಮಾಧ್ಯಮಗಳ ಮೂಲಕ ಕಲೆಯ ನೇರವಾದ ಅನುಭವವನ್ನು ಜನರು ಪಡೆಯಲು ಸಾಧ್ಯವಿಲ್ಲ ಬದಲಿಗೆ ಜನರು ತಾವೇ ಮೂಲ ಕಲಾಕೃತಿಗಳನ್ನು ನೋಡಲು ಸಾಧ್ಯವಾದಾಗ ಮಾತ್ರ ಇದು ಸಾಧ್ಯವಾಗುತ್ತದೆ.

ಭಾರತೀಯರಿಗೂ ಮತ್ತು ಪಾಶ್ಚಾತ್ಯ ರಾಷ್ಟ್ರಗಳವರಿಗೂ ಇರುವ ಅಂತರವನ್ನು ಗಮನಿಸಬಹುದಾಗಿದೆ. ಪಾಶ್ಚಾತ್ಯರು ಪ್ರದರ್ಶನಾಲಯಗಳು ಹಾಗೂ ಸಂಗ್ರಹಾಲಯಗಳಿಗೆ ಅಲ್ಲಿನ ಪ್ರಾಥಮಿಕ ಶಿಕ್ಷಣದಿಂದಲೇ ಮಕ್ಕಳನ್ನು ಕರೆದು ಕೊಂಡು ಹೋಗಿ ಗ್ಯಾಲರಿ ಹಾಗೂ ಮ್ಯುಜಿಯಮ್‌ಗಳಲ್ಲಿರುವ ಕಲಾಕೃತಿಗಳನ್ನು ವೀಕ್ಷಿಸುವುದರೊಂದಿಗೆ ಅಲ್ಲಿ ಪ್ರದರ್ಶಿಸಲಾಗಿದ್ದ ಕಲಾಕೃತಿಗಳಲ್ಲಿಯ ವಿವಿಧ ಅಂಶಗಳನ್ನು ಕುರಿತು ತಮ್ಮ ನೋಟಬುಕ್‌ಗಳಲ್ಲಿ ಬರೆದು ವರದಿಯನ್ನು ಒಪ್ಪಿಸ ಬೇಕು. ಪ್ರತಿ ತಿಂಗಳ ಒಂದು ಪ್ರದರ್ಶನಾಲಯ ಹಾಗೂ ಸಂಗ್ರಹಾಲಯಗಳಿಗೆ ಭೇಟಿಕೊಟ್ಟು ವರದಿ ಒಪ್ಪಿಸುವುದು ಹಾಗೂ ಆ ಕುರಿತು ಚರ್ಚೆಗಳು ನಡೆಯುತ್ತವೆ.

ನಮ್ಮಲ್ಲಿ ಈ ರೀತಿಯಾದ ಕಾರ್ಯಕ್ರಮಗಳಾಗಲಿ, ಧೋರಣೆಗಳಾಗಲಿ ಕಡಿಮೆಯಾಗಿವೆ. ಕಲೆಯ ಮೂಲಕ ಜನರನ್ನು ತಲುಪುವ ವ್ಯವಸ್ಥೆ ಮೊದಲು ಆಗಬೇಕು. ಕಲೆ ಮತ್ತು ಅದರ ಪ್ರಸ್ತುತತೆಯ ಕುರಿತು ಜನರನ್ನು ಜಾಗ್ರತೆ ಗೊಳಿಸಬೇಕು ಹೀಗಾದಾಗ ಮಾತ್ರ ಗಂಭೀರವಾದ ಕಲಾಕೃತಿ ಜನರನ್ನು ತಲುಪುವ ಆಶೆ ಹೊಂದಿದ್ದರೆ ಅದು ಸ್ವಾಭಾವಿಕವಾಗಿಯೇ ಸಾಮಾನ್ಯರನ್ನು ತಲುಪುತ್ತದೆ.

ನನಗೆ ಮಾನವಾಕೃತಿಗಳು ಮುಖ್ಯ ವ್ಯಕ್ತಿಗಳು ಅವರ ಮುಖಗಳು ಅವರ ಅನುಭವಗಳು ನನ್ನ ಕೃತಿಗಳಲ್ಲಿ ಸಮೀಕರಣಗೊಳ್ಳುತ್ತವೆ. ಪ್ರತಿಯೊಬ್ಬ ಲೇಖಕ ಕಲಾವಿದ, ಕವಿ ಅಥವಾ ಯಾವುದೇ ಸೃಜನಶೀಲ ವ್ಯಕ್ತಿ ತನ್ನ ಕೃತಿಗಳ ಮೂಲಕ ಚಿರಂಜೀವಿತ್ವವನ್ನು ಬಯಸುತ್ತಾನೆ ನಾನು ಅದರಿಂದ ಹೊರತಲ್ಲ ನನ್ನ ಕೃತಿಗಳು ಕಾಲದ ಪರೀಕ್ಷೆಯಲ್ಲಿ ನಿಂತು ಅದರಲ್ಲಿ ಯಶಸ್ವಿಯಾಗಬೇಕು ಎಂದು ಬಯಸುವೆನು ನನ್ನ ಕೃತಿಗಳು ಸಾಮಾಜಿಕ ಬದಲಾವಣೆಯಲ್ಲಿ ಅಥವಾ ಸಮಾಜದ ಒಳಿತಿಗೆ ಕಿಂಚಿತ್ತಾದರೂ ಸೇವೆ ಸಲ್ಲಿಸಿದರೆ ಸಾರ್ಥಕ ಎನ್ನುವ ಆಶಯ ಹೊಂದಿದ್ದೇನೆ ಎನ್ನುವ ಕೃಷ್ಣರಾವ್.ಬಿ.ಕುಲಕರ್ಣಿ ಅವರ ಮಾತುಗಳು ಕಲಾವಿದ ಸಮಾಜ ಮುಖಿ ಎನ್ನುವುದನ್ನು ದೃಢೀಕರಿಸಿದಂತಿದೆ.

ಕೆ.ಬಿ.ಕೆ.ಅವರ ಕಲಾಕೃತಿಗಳು ಕಲಾಶೈಲಿ ತಂತ್ರ ಹಾಗೂ ವರ್ಣಗಾರಿಕೆ:

ವ್ಯಕ್ತಿಯ ವ್ಯಕ್ತಿತ್ವದ ಮುಖ್ಯರೂಪರೇಷಗಳು ಬಾಲ್ಯದಲ್ಲಾಗುವ ಅನುಭವಗಳಿಂದಲೇ ರೂಪಿಸಲ್ಪಟ್ಟಿರುತ್ತದೆ ಅನಂತರದ ಬೆಳವಣಿಗೆಯು ಬಹುಮಟ್ಟಿಗೆ ಬಾಲ್ಯದಲ್ಲಿ ರೂಪಿಸಲ್ಪಟ್ಟಿರುವ ವ್ಯಕ್ತಿತ್ವದ ಚೌಕಟ್ಟಿನಲ್ಲಿಯೇ ನಡೆಯುತ್ತದೆ ಹಾಗೂ "ಅವನ ಸ್ಥಿತಿ–ಗತಿಗಳು ಮುಂದೆ ಬದಲಾದರೂ ಅವನ ಪ್ರಜ್ಞೆಯ ಆಳದಲ್ಲಿ ಸ್ಥಿರವಾಗಿ ನಿಂತ ಈ ಅನುಭವ ದ್ರವ್ಯಗಳು ಅಭಿವ್ಯಕ್ತಿಯ ಸಂದರ್ಭದಲ್ಲಿ ಅಪ್ರಜ್ಞಾಪೂರ್ವಕವಾಗಿಯಾದರೂ ಚಿಲುಮೆಯಂತೆ ಚಿಮ್ಮುತ್ತವೆ" ಎನ್ನುವ ಸಿಗ್ಮಂಡ್‌ಫ್ರಾಯ್ಡ್‌ನ ಅಭಿಪ್ರಾಯಗಳನ್ನು ಸಮರ್ಥಿಸುವಂತೆ ಕೃಷ್ಣರಾವ್. ಬಿ.ಕುಲಕರ್ಣಿಅವರ ಸ್ಥಿತಿಗತಿಗಳು ಬೆಳೆದ ಪರಿಸರ ಅವರ ವ್ಯಕ್ತಿತ್ವದ ಮೇಲೆ ಆದಂತಹ ಪ್ರಭಾವಗಳು ಅವರ ಜೀವನ ಪರ್ಯಂತ ಹಿಂಬಾಲಿಸುವವು ಯಾಕೆಂದರೆ ಅವರ ಆ ನೆನಪುಗಳಲ್ಲಿ ಅನುಭವದ ದ್ರವ್ಯಗಳಾಗಿ ಅವರ ಅಭಿವ್ಯಕ್ತಿಯ ಮೋಟಿವ್‌ಗಳಾಗಿ ಹೊರಹೊಮ್ಮುತ್ತವೆ.

ಬದುಕಿನ ನೋವು ನಲಿವುಗಳ ಹಲವಾರು ಮಜಲುಗಳನ್ನು ಕಂಡ ಬದುಕಿನ ಸ್ವಾನುಭವ ದ್ರವ್ಯಗಳನ್ನು ತಮ್ಮ ಕೃತಿಗಳಲ್ಲಿ ಯಶಸ್ವಿಯಾಗಿ ತಂದಿರುವ ಇವರ ಕಲಾಶೈಲಿ, ವೈವಿದ್ಯಮಯ ವ್ಯಕ್ತಿತ್ವದ ಹಲವು ಸರಣಿಗಳಾಗಿ ಮೂಢಿ ಬಂದಿವೆ ಇವರ ಕಲಾಸೃಷ್ಟಿ ನಿರಂತರವಾಗಿ ಕುಡಿಯೂಡೆಯುತ್ತಲೇ ಇತ್ತು. ಬದುಕಿನ ಹಲವು ಪರಿಗಳನ್ನು ಕಂಡು ಅನುಭವಿಸಿದ ಕೆ.ಬಿ.ಕುಲಕರ್ಣಿ ಅವರ ಕಲಾಕೃತಿಗಳು ಹೆಚ್ಚಾಗಿ ಸ್ವಾನುಭವ ದೃಶ್ಯಗಳನ್ನೇ ದುಡಿಸಿಕೊಂಡು ಬೆಳದಿದೆ. ಈ ಹಿನ್ನೆಲೆಯಲ್ಲಿ ಅವರ ವರ್ಣಚಿತ್ರಗಳು ರೇಖಾಚಿತ್ರಗಳು ಇತರ ಹಲವು ಸಾಮಾನ್ಯ ಕಲಾವಿದರ ಕೃತಿಗಳಿಗಿಂತ ವಿಶಿಷ್ಠ ಆವರಣವನ್ನು ಪಡೆದುಕೊಳ್ಳುತ್ತವೆ. ಹೀಗೆ ಸ್ವಾನುಭವ, ವೈಚಾರಿಕತೆ, ಮಾನವೀಯ ಕಾಳಜಿ ಮುಂತಾದವುಗಳ ಸಂಗಮವಾದ ಇವರ ಕಲಾಕೃತಿಗಳನ್ನು ಹಲವು ನೆಲೆಗಳಲ್ಲಿ ಕಾಣಬಹುದಾಗಿದೆ. ಪ್ರಮುಖವಾಗಿ ಎರಡು ದೃಷ್ಟಿಗಳಿಂದ ನೋಡಬಹುದಾಗಿದೆ. ಮೊದಲನೆಯದು ಅವರ ಚಿತ್ರಯೋಜನೆ ಹಾಗೂ ತಂತ್ರ. ಎರಡನೇಯದು ಅವರ ಕೃತಿಗಳ ವಸ್ತು ವಿಷಯ ಚಿತ್ರಕಲೆಯಲ್ಲಿ ಸಾಮಾನ್ಯವಾಗಿ ಕಲಾವಿದರಲ್ಲಿ ಒಂದು ನಿರ್ದಿಷ್ಟ ಅವಧಿಯಲ್ಲಿ ಒಂದು ನಿರ್ದಿಷ್ಟ ಮಾಧ್ಯಮ ಹಾಗೂ ತಂತ್ರಗಳಿಗೆ ಮಾರು ಹೋಗಿರುವುದು ಸ್ವಾಭಾವಿಕ ಅಂಶವಾಗಿದೆ. ಕೆ.ಬಿ.ಕುಲಕರ್ಣಿ ಅವರು ಇದಕ್ಕೆ ಹೊರತಾಗಿಲ್ಲ ಕಲಾವಿದರು ತಾವು ಕಲಾಶಾಲೆಯಲ್ಲಿ ಅಭ್ಯಾಸ ಮಾಡುವಾಗ ಚಲಾವಣೆಯಲ್ಲಿರುವ ಮಾಧ್ಯಮಗಳನ್ನೇ ಹೆಚ್ಚಾಗಿ ನಂಬುವುದು ಅಥವಾ ಅನುಸರಿಸುವುದು ಸ್ವಾಭಾವಿಕ. ಆಗ ಮುಂಚೂಣಿಯಲ್ಲಿದ್ದ ಕಲಾವಿದರ ಮಾಧ್ಯಮವಾಗಿದ್ದುದು ಜಲವರ್ಣ ಹಾಗೂ ತೈಲವರ್ಣಗಳು. ಅಂತೆಯೇ ಕೆ.ಬಿ.ಕುಲಕರ್ಣಿ ಅವರೂ ಜಲವರ್ಣ ಮತ್ತು ತೈಲವರ್ಣವನ್ನೇ ಪ್ರಾತಿನಿಧಿಕ ಮಾಧ್ಯಮವಾಗಿ ಬಳಸಿರುವರು. ಅವರು ಅನುಸರಿಸುವ ತಂತ್ರಕ್ಕೆ ಜಲವರ್ಣ ಮತ್ತು ತೈಲವರ್ಣ ಮಾಧ್ಯಮ ತುಂಬಾ ಚೆನ್ನಾಗಿ ಹೊಂದಿಕೊಳ್ಳುವುದೂ ಇನ್ನೊಂದು ಕಾರಣವೆನ್ನಬಹುದಾಗಿದೆ.

ಭಾರತದಲ್ಲಿಯ ಹೆಚ್ಚಿನ ಕಲಾವಿದರು ಒಂದು ನಿಶ್ಚಿತ ತಂತ್ರಕ್ಕೆ ಮಾರು ಹೋದ ನಂತರ ಅದನ್ನು ಹಲವಾರು ವರ್ಷಗಳು ಬಿಡಲಾಗದ ಅವರ ಸ್ಥಿತಿ ವಸ್ತು ಹಾಗೂ ಧೋರಣೆಗಳು ಬದಲಾದರೂ, ಈ ಕಲಾವಿದರಲ್ಲಿ ತಂತ್ರ ಸುಲಭವಾಗಿ ಬದಲಾಗುವುದಿಲ್ಲ ಈ ಕಲಾವಿದರ ಸಾಲಿಗೆ ಸೇರುವ ಕೆ.ಬಿ.ಕುಲಕರ್ಣಿ ಅವರು ತಮ್ಮ ತೈಲವರ್ಣ ಚಿತ್ರಗಳಲ್ಲಿ ವಸ್ತು ಬದಲಾದರೂ ಒಂದು ನಿಶ್ಚಿತ ತಂತ್ರವನ್ನು ಕಳೆದ ಸುಮಾರು ಒಂದು ದಶಕಕ್ಕಿಂತಲೂ ಹೆಚ್ಚಿನ ಸಮಯದಿಂದ ಅನುಸರಿಸುತ್ತಿದ್ದಾರೆ. ಬಹಳಷ್ಟು ಕಲಾವಿದರು ತಮ್ಮ ಕಲಾಕೃತಿಗಳನ್ನು ಹೆಚ್ಚಾಗಿ ಪೂರ್ವನಿರ್ಧರಿತವಲ್ಲದ ರೀತಿಯಲ್ಲಿ ಮಾಡಿದರೆ, ಈ ಕಲಾವಿದ ತಮ್ಮ ಸಂಯೋಜನೆಯನ್ನು ಹಾಗೂ ವ್ಯಕ್ತಿ ಚಿತ್ರವನ್ನು ಮೊದಲು ಚಿಕ್ಕದಾಗಿ ಕಾಗದದ ಮೇಲೆ ಸ್ಕೆಚ್ ಮಾಡಿಕೊಂಡು ನಂತರ ಕ್ಯಾನ್ವಾಸ್ ಮೇಲೆ ಅದನ್ನು ಮೂಡಿಸುತ್ತಾರೆ. ನಂತರ ವರ್ಣವನ್ನು ಮಾಡುವಾಗಲೂ ಅವರದೇ ಆದ ವೈಶಿಷ್ಟ್ಯವನ್ನು ಹೊಂದಿರುತ್ತಿತ್ತು. ಮೊದಲು ನೆರಳಿನ ಭಾಗ, ನಂತರ ಬೆಳಕಿನ ಭಾಗದೆಡೆಗೆ ವರ್ಣವನ್ನು ಬಳಸುತ್ತಿದ್ದರು. ರೆಂಬ್ರಾಂಟ್ ರುಬೆನ್ಸ್‌ರಂತಹ ಶ್ರೇಷ್ಠ ಪಾಶ್ಚಿಮಾತ್ಯ ಕಲಾವಿದರ ಹಲವು ತಂತ್ರಗಳನ್ನು ಇವರು ಬಳಸಿಕೊಳ್ಳುತ್ತಿದ್ದರು.

ಕ್ಯಾನ್ವಾಸ್ ಮೇಲೆ ಚಾರ್ಕೂಲ್‌ನಿಂದ ರೇಖೆಗಳ ಮೂಲಕ ಆಕೃತಿಗಳನ್ನು ಬರೆದ ನಂತರ ಪ್ಯಾಲೆಟ್‌ನಲ್ಲಿ ಅವರ ಆಯ್ಕೆಯ ಕೆಲವೇ ವರ್ಣಗಳನ್ನು ಹಾಕಿಕೊಂಡು ಅಗತ್ಯಕ್ಕೆ ತಕ್ಕಂತೆ ಲಿನ್‌ಸಿಡ್ ಆಯಿಲ್‌ನ್ನು ಮಿಶ್ರಣ ಮಾಡಿಕೊಂಡು ಅದನ್ನು ಬ್ರಷ್‌ದಲ್ಲಿ ತಗೆದುಕೊಂಡು ಅಲ್ಲಲ್ಲಿ ಹಚ್ಚುತ್ತಾ ಹೋಗುತ್ತಾರೆ. ಇವರು ವರ್ಣದಲ್ಲಿ ತೈಲ ಮಿಶ್ರಣಮಾಡಿಕೊಂಡು ಜಲವರ್ಣದಂತೆ ತೆಳ್ಳಗೆ ವರ್ಣವನ್ನು ಹಚ್ಚುತ್ತಾರೆ. ಅರೆಪಾರದರ್ಶಕವಾಗಿ, ಆಕರ್ಷಕವಾಗಿ ಕಾಣುವಂತೆ ಶ್ರೀಮಂತ ವರ್ಣಗಳನ್ನು ಬಳಸುವುದರೊಂದಿಗೆ ಚಿತ್ರಕ್ಷೇತ್ರವಿಡೀ ಮೈವಳಿಕೆಯಲ್ಲಿನ ವೈವಿಧ್ಯತೆಗಳ ಮೂಲಕ ಕೆ.ಬಿ.ಕುಲಕರ್ಣಿ ಅವರು ನೋಡುಗನ ದೃಷ್ಟಿಯನ್ನು ಹಿಡಿದಿಡುವ ಪ್ರಯತ್ನ ಮಾಡುತ್ತಾರೆ.

ಈ ವರ್ಣಚಿತ್ರಗಳ ವಸ್ತು ವಿಷಯುಗಳನ್ನು ಗಮನಿಸಿದಾಗ ಸ್ವಕೀಯವೆನಿಸುತ್ತವೆ. ಹೀಗೆ ವಸ್ತು ನಮ್ಮದಾಗಿರುವಂತೆ ರೂಪದಲ್ಲಿಯೂ ನವ್ಯವನ್ನು ದೇಶೀಯತೆಗೆ ಒಗ್ಗಿಸುವ ಗುಣ ವಿಶೇಷ ಇವರದ್ದು, ಸಾಮಾಜಿಕ ನೆಲೆಯ ವಸ್ತುಗಳನ್ನೇ ಇವರು ಹೆಚ್ಚಾಗಿ ಆರಿಸಿಕೊಳ್ಳುವುದರಿಂದ ಸಂಯೋಜನೆಯಂತೆ ವ್ಯಕ್ತಿ ಚಿತ್ರಗಳಲ್ಲಿ ಹಾಗೂ ಭಾವಚಿತ್ರಗಳಲ್ಲಿ ಅತ್ಯಂತ ಪರಿಣಿತರು ಆದರೆ ಇದರಲ್ಲಿ ಬಳಸುವ ಮಾಡಲ್ (ವ್ಯಕ್ತಿ)ಗಳು ವಿಶೇಷವಾಗಿ ಮಹಿಳೆಯರೇ ಆಗಿರುತ್ತಿದ್ದರು. ಅದೂ ಅವರು ತಮ್ಮ ವಿದ್ಯಾರ್ಥಿಗಳನ್ನೇ ಮಾಡಲ್(ವ್ಯಕ್ತಿ)ಗಳಾಗಿ ಬಳಸಿರುವುದು ವಿಶೇಷ. ಬೇರೆಡೆ ಪ್ರಾತ್ಯಕ್ಷಿಕೆ ನೀಡಲು ಹೋಗುವುದಾದರೆ ತಾವು ಆಯ್ಕೆ ಮಾಡಿದ ಮಾಡಲ್‌ಗಳನ್ನೇ ಕರೆದುಕೊಂಡು ಹೋಗುತ್ತಿದ್ದರು.

ಕಲಾವಿದನಿಗೂ ತತ್ವಾದರ್ಶಗಳಿಗೂ ಸಂಬಂಧವಿರಬೇಕು ಎನ್ನುವ ವಿಚಾರ, ಚರ್ಚೆಗಳು ನಮ್ಮಲ್ಲಿ ಹಿಂದಿನಿಂದಲೂ ಬಂದಿವೆ. "ಕಲೆಗಾಗಿ ಕಲೆ"

ಎನ್ನುವ ಗುಂಪು ಒಂದೆಡೆ ಆದರೆ, "ಕಲೆ ಸಮಾಜಕ್ಕಾಗಿ" ಎನ್ನುವ ಇನ್ನೊಂದು ಬಣ ತಮ್ಮ ವಾದವನ್ನು ಗಟ್ಟಿಯಾಗಿ ಸಮರ್ಥಿಸುವಂತಹ ಕಲಾವಿದರು ಇಂದಿಗೂ ಸಾಕಷ್ಟು ಸಂಖ್ಯೆಯಲ್ಲಿ ಕಂಡುಬರುತ್ತಾರೆ. ಅದರಿಂದ ವಿವಿಧ ಹಂತಗಳಲ್ಲಿ ದೂರ ಸರಿದು ಅದರ ಇನ್ನೊಂದು ತುದಿಯಲ್ಲಿ ನಿಂತು ಸಾಮಾಜಿಕ ಬದ್ಧತೆಯನ್ನು ಪ್ರತಿಪಾದಿಸುವ ಕಲಾವಿದರೂ ಸಾಕಷ್ಟಿದ್ದಾರೆ. ಈ ಬಗೆಯ ಬದ್ಧತೆಯನ್ನು ಪ್ರತಿಪಾದಿಸುವಂತಹ ಕಲಾಕೃತಿಗಳಲ್ಲಿ ಒಂದು ಬಗೆಯ ಎಡ ಪಂಥೀಯ ವಾದವೆಂಬುದೂ ಕೇಳಿ ಬರುತ್ತಿತ್ತು. ಆದರೆ ಇದನ್ನೂ ಅಲ್ಲಗಳೆದ ಕೆ.ಬಿ.ಕುಲಕರ್ಣಿ ಅವರು ನಾವು ಸಮಾಜದ ಒಂದು ಅಂಶವಾಗಿದ್ದು ಇಲ್ಲಿ ಏನೇ ಮಾಡಿದರೂ, ನೋಡಿದರೂ ಸಮಾಜದ ಗುಣವೇ ಅದರಲ್ಲಿರುತ್ತದೆ. ಜೀವನದಲ್ಲಿ ಬಂದ ನೋವು ನಲಿವುಗಳು ನಮ್ಮ ಕಲಾಕೃತಿಗಳಲ್ಲಿ ಮೂಡಿಬರುವುದು ಸ್ವಾಭಾವಿಕ ಎನ್ನುತ್ತಿದ್ದರು.

ಕಲೆಯು ನಮ್ಮ ಸಾಮಾಜಿಕ ಬದುಕನ್ನು ಅವಲಂಬಿಸಿ ಜನ್ಮತಾಳುವಂತಹ ಸೃಜನಶೀಲ ಪ್ರಕ್ರಿಯೆ. ಅದು ಸಾಮಾಜಿಕ ಬದುಕನ್ನು ಅವಲಂಬಿಸಿರುವುದರಿಂದ ಅದೊಂದು ಸಾಮಾಜಿಕ ಪ್ರತಿಕ್ರಿಯೆ ಕಲೆಯಲ್ಲಿ ಹುದುಗಿರುವಂತಹ ಅನುಭವ ದ್ರವ್ಯ ಈ ಸಮಾಜದ್ದೇ ಆಗಿರುವಾಗ ಕಲಾವಿದನಿಗೆ ತನ್ನನ್ನು ಗುರುತಿಸಿಕೊಂಡ ಸಾಮಾಜಿಕ ಅನುಭವದ ಆಲೋಚನೆಗಳ ನೆಲೆಯೊಂದು ಇರುತ್ತದೆ ಆಬಗೆಯ ಅನುಭವಗಳನ್ನು ಗ್ರಹಿಸುವಲ್ಲಿ ಏರಿಳಿತಗಳಿರಬಹುದು. ಒಟ್ಟಾರೆಯಾಗಿ ಅದು ಸಾಮಾಜಿಕ ಬದುಕಿನೊಂದಿಗೆ ಸಂಬಂಧ ಇಟ್ಟುಕೊಂಡಿರುತ್ತದೆ. ಕೆ.ಬಿ.ಕುಲಕರ್ಣಿ ಅವರ ಇಡೀ ಕಲಾಜೀವನವನ್ನು ವ್ಯಾಪಿಸಿರುವುದು ಮಾನವ ಕೇಂದ್ರಿತ ಕಾಳಜಿಯನ್ನು ಹೊಂದಿರುವುದಾಗಿದೆ.

ಇಡೀ ಚಿತ್ರವನ್ನು ಅನನ್ಯತೆಯಿಂದ ವಿಭಾಗಿಸುವ ಇವರ ಸಂಯೋಜನೆಗಳು ಸಾಮಾನ್ಯವಾಗಿ ಸಂಕೀರ್ಣತೆಯಿಲ್ಲದೇ ಸರಳವಾಗಿರುತ್ತವೆ ವಿವಿಧ ರೀತಿಯ ಮೈವಳಿಕೆಗಳ ಮುನ್ನಲೆಯಲ್ಲಿ ಒಬ್ಬ ವ್ಯಕ್ತಿಯ (ಮಹಿಳೆಯ) ಆಕೃತಿ ಇವರಲ್ಲಿ ಮುಖ್ಯವಾಗಿರುತ್ತದೆ. ಜನಸಮೂಹಕ್ಕಿಂತ ಒಬ್ಬ ಮಹಿಳಾ ವ್ಯಕ್ತಿ ಹಾಗೂ ಅವಳ ಸಮಸ್ಯೆಗಳನ್ನು ಇವರು ಗಂಭೀರವಾಗಿ ಪರಿಗಣಿಸುವ ಕಾರಣಕ್ಕಾಗಿಯೇ ಇವರ ಕೃತಿಗಳಲ್ಲಿ ಜನ ಸಮುದಾಯಕ್ಕಿಂತ ಒಬ್ಬ ಮಹಿಳಾ ವ್ಯಕ್ತಿ ಮುಖ್ಯವಾಗಿರುವುದು ಕಂಡುಬರುತ್ತದೆ.

ಶೈಲಿಯ ದೃಷ್ಟಿಯಿಂದ ಸಾಮಾನ್ಯರಿಗೆ ಅರ್ಥವಾಗದ ವಿರೂಪಕ್ಕಿಂತಲೂ ವಾಸ್ತವವಾದದ ಸುತ್ತಲೂ ಇವರ ಶೈಲಿಯಿರುವುದರಿಂದ ಎಲ್ಲ ವರ್ಗದ ವ್ಯಕ್ತಿಗಳಿಗೆ ಇವರ ಕಲಾಕೃತಿಗಳು ಆಪ್ತವೆನಿಸುತ್ತವೆ, ಸುಲಭವಾಗಿ ತಿಳಿಯುತ್ತವೆ ಹೀಗೆ ಸಂಕೇತಗಳು, ಪ್ರತಿಮೆಗಳು ಇತ್ಯಾದಿಗಳ ಸಂಕೀರ್ಣತೆ ಗೊಂದಲಗಳಿಲ್ಲದೇ ಪ್ರತಿಯೊಬ್ಬರು ಸುಲಭವಾಗಿ ಇವರ ಕಲಾಕೃತಿಗಳನ್ನು ನೋಡಿ ಗ್ರಹಿಸಬಹುದಾಗಿದೆ.

ಕೆ.ಬಿ.ಕುಲಕರ್ಣಿ ಅವರ ಈ ಭಿನ್ನವಾದ ವಸ್ತುಗಳು ಕೂಡಾ ಅಪರೂಪಕ್ಕೆ ಅವರ ಕಲಾಕೃತಿಗಳಲ್ಲಿ ಬಂದಿವೆ. ಇದರಲ್ಲಿ ಮಹಿಳಾ ನಗ್ನ ಚಿತ್ರಗಳನ್ನು

ರೇಖಾಚಿತ್ರಗಳಲ್ಲಿ ಅತ್ಯಂತ ರೋಮ್ಯಾಂಟಿಕ್ ಆಗಿಯೇ ಚಿತ್ರಿಸಿದ್ದು, ಈ ಚಿತ್ರಗಳ ಸರಣಿಯಲ್ಲೂ ಕಾಮದ ದೃಷ್ಟಿಗಿಂತಲೂ ರೋಮ್ಯಾಂಟಿಕ್ ಕಲಾವಿದರಂತೆ ಹೆಣ್ಣಿನ ದೇಹವನ್ನು ವೈಭವೀಕರಿಸಿ ಚಿತ್ರಿಸಿರುವರು.

ರೇಖಾಚಿತ್ರಗಳು :

1) ನಿದ್ರೆಯಲ್ಲಿರುವ ಮಹಿಳೆ:

ಈ ಚಿತ್ರಕಲಾಕೃತಿಯಲ್ಲಿ ಮಹಿಳೆಯೋರ್ವಳು ತನ್ನೆರಡೂ ಕೈಗಳನ್ನು ತಲೆಯ ಹಿಂಭಾಗದ ದಿಂಬಿನಲ್ಲಿರಿಸಿ ನಿದ್ರಿಸುತ್ತಿರುವ ದೃಶ್ಯವಿದ್ದು, ತಲೆ ಮತ್ತು ಬುಜ ಎದೆಯಭಾಗಗಳನ್ನು ಮಾತ್ರಚಿತ್ರಿಸಿದ್ದು ಅತ್ಯಂತ ಕಡಿಮೆಯಾಗಿ ರೇಖೆಗಳನ್ನು ಬಳಸಿ ನೆರಳು ಬೆಳಕಿನ ಮಹತ್ವದೊಂದಿಗೆ ಮಹಿಳೆಯ ಭಾವನೆಗಳನ್ನು ಅತ್ಯಂತ ಸುಂದರವಾಗಿ ಮೂಢಿಸಿರುವುದು ಕಂಡುಬರುತ್ತದೆ.

2) ನಗ್ನ ಮಹಿಳೆ :

ಈ ಕಲಾಕೃತಿಯನ್ನು 1962ರಲ್ಲಿ ನಿರ್ಮಾಣಗೊಂಡಿದ್ದು, ಬೆತ್ತಲೆಯಾದ ಮಹಿಳೆಯೋರ್ವಳು ತನ್ನೆರಡು ಕೈಗಳನ್ನು ಮಡಿಚಿದ್ದು ಬಲಗೈಯಲ್ಲಿರುವ ಯಾವುದೋ ಒಂದು ವಸ್ತುವನ್ನು ನಿರೀಕ್ಷಿಸುತ್ತ ಬೋರಲಾಗಿ ಮಲಗಿರುವ ದೃಶ್ಯವಿದೆ. ಈ ಕಲಾಕೃತಿಯಲ್ಲಿ ಅತ್ಯಂತ ಕಡಿಮೆಯಾಗಿ ರೇಖೆಗಳನ್ನು ಬಳಸಿದ್ದು ಅಷ್ಟೇ ಶಕ್ತಿಯುತವಾಗಿ ರೇಖೆಗಳು ಮೂಡಿ ಬಂದಿವೆ ನೆರಳು ಬೆಳಕಿನ ವೈಶಿಷ್ಟ್ಯದೊಂದಿಗೆ, ಈ ನಗ್ನವಾಗಿರುವ ಮಹಿಳೆಯ ಪ್ರತಿಯೊಂದು ಆಕಾರವೂ ಗೋಲಾಕಾರವಾಗಿ ನೈಜ ಮಹಿಳೆಯ ದೇಹದ ಆಕಾರದಂತೆ ಉತ್ಕೃಷ್ಟವಾಗಿ ಮೂಡಿಬಂದಿದೆ.

3) ಯೋಚನಾ ಮಗ್ನಳಾದ ಮಹಿಳೆ :

ಈ ಕಲಾಕೃತಿಯು ಸಂಪೂರ್ಣ ಮಹಿಳಾ ವ್ಯಕ್ತಿ ಚಿತ್ರವನ್ನು ರಚಿಸಿದ್ದು, ಈ ಮಹಿಳೆಯು ಪರಿಚಯದವಳಾಗಿದ್ದು, ಯಾವಾಗಲೂ ಏನಾದರೂ ಒಂದು ಚಿಂತೆಯಲ್ಲಿಯೇ ಇರುವ ಈ ಹುಡುಗಿಯ ಚಿತ್ರವನ್ನು ಬರೆದಿದ್ದು ಮಂಡೆಗಾಲೂರಿ ತನ್ನೆರಡೂ ಕೈಗಳನ್ನು ಮಳಕಾಲು ಹತ್ತಿರದಲ್ಲಿಟ್ಟು ನೆಲವನ್ನೇ ದಿಟ್ಟಿಸಿನೋಡುತ್ತಾ ಕುಳಿತಿರುವ ದೃಶ್ಯವಾಗಿದೆ ಚಿಂತೆಯನ್ನು ಮಾಡುತ್ತ ಕುಳಿತಿರುವ ಭಂಗಿಗೆ ಹೆಚ್ಚಿನ ಮಹತ್ವವನ್ನು ನೀಡಿ, ನೆರಳು ಬೆಳಕಿನೊಂದಿಗೆ ಕನಿಷ್ಟ ರೇಖೆಗಳನ್ನು ಬಳಸಿ ತಲೆಯ ಕಪ್ಪುಕೂದಲು ಬಟ್ಟೆಯ ನೆರಿಗೆಗಳು ಉತ್ತಮವಾಗಿ ಮೂಢಿಬಂದಿವೆ ಹಾಗೂ ಯೋಚನಾ ಮಗ್ನಳಾಗಿ ಕುಳಿತಿರುವ ಭಂಗಿ ಹಾಗೂ ಮುಖದ ಭಾವನೆಗಳು ಚೆನ್ನಾಗಿ ಮೂಢಿಬಂದಿವೆ.

4) ದಿಂಬಿಗೆ ಒರಗಿರುವ ಮಹಿಳೆ :

ಈ ಕಲಾಕೃತಿಯು 1961ರಲ್ಲಿ ನಿರ್ಮಾಣಗೊಂಡಿದ್ದು ಮಹಿಳೆಯು ಗಾದಿಯ ಸುರಳಿಯೊಂದಕ್ಕೆ ಒರಗಿಕೊಂಡು ಮಲಗಿರುವ ದೃಶ್ಯವಿದೆ. ಈ

ಮಹಿಳೆಯ ತಲೆ ಮತ್ತು ಎದೆಯ ಭಾಗಗಳಿಗೆ ಹೆಚ್ಚಿನ ಮಹತ್ವ ನೀಡಿ ಉಳಿದ ಭಾಗವನ್ನು ಸಂಕ್ಷಿಪ್ತವಾಗಿ ಚಿತ್ರಿಸಿದ್ದು ಈ ಮಹಿಳಾವ್ಯಕ್ತಿಯ ಎದೆ ಹಾಗೂ ಸೊಂಟದ ಭಾಗಕ್ಕೆ ಮಹತ್ವ ಬರುವಂತೆ, ಹಿನ್ನೆಲೆಯಲ್ಲಿ ನೆರಳನ್ನು ತೋರಿಸಿದ್ದು ವಿಶಿಷ್ಠವಾಗಿ ಕಂಡುಬರುತ್ತದೆ.

5) ಸಾದಾಪೇಪರ್ ಮೇಲೆ ವ್ಯಕ್ತಿಚಿತ್ರಣ :

ಕಲಾಕೃತಿಯು 1948ರಲ್ಲಿ ರಚನೆಗೊಂಡಿದ್ದು ಅರೆಬೆತ್ತಲೆ ಮಹಿಳೆಯ ವ್ಯಕ್ತಿಚಿತ್ರಣವನ್ನು ಸಾದಾ ಕಂದು ವರ್ಣದ ಪೇಪರ ಮೇಲೆ ಚಿತ್ರಿಸಲಾಗಿದೆ. ಇದು ಅತ್ಯಂತ ಅವರ ಕಲಾಕೃತಿಗಳಲ್ಲಿಯೇ ಹಳೆಯ ಕಲಾಕೃತಿಯಾಗಿದ್ದು ಯಾವುದೇ ನೆರಳು ಬೆಳಕುಗಳಿಲ್ಲದೇ ಬರೇ ರೇಖಾಚಿತ್ರವಾಗಿದೆ ಸ್ಟೂಲೊಂದರ ಮೇಲೆ ಅರೆ ನಗ್ನವಾಗಿರುವ ಮಹಿಳೆಯು, ಸೊಂಟದಿಂದ ಕೆಳಗಡೆ ಸೀರೆಯನ್ನು ಟ್ಟಿದ್ದು ಎರಡೂ ಕೈಗಳು ಕೆಳಗಡೆ ಬಿಟ್ಟಿದ್ದು ಎದುರುಗಡೆ ಏನನ್ನೊ ನಿರೀಕ್ಷಿಸುತ್ತ ಕುಳಿತಿರುವ ಮಹಿಳೆಯ ಚಿತ್ರಕೃತಿಯಾಗಿದೆ ಪ್ರಮಾಣಬದ್ಧವಾಗಿ, ಅಷ್ಟೇ ಶಕ್ತಿಯುತವಾದ ರೇಖೆಗಳು ಜೌಚಿತ್ಯ ಪೂರ್ಣವಾಗಿ ಮೂಡಿಬಂದಿವೆ.

6) ವ್ಯಕ್ತಿಚಿತ್ರಣ :

1951ರಲ್ಲಿ ಈ ಕಲಾಕೃತಿಯನ್ನು ಚಿತ್ರಿಸಲಾಗಿದ್ದು ಈ ಕುಳಿತಿರುವ ಮಹಿಳಾಚಿತ್ರದಲ್ಲಿ ನೆರಳು ಬೆಳಕುಗಳ ವಿಶಿಷ್ಠವಾದ ಬಳಕೆಯೊಂದಿಗೆ ಪೆನ್ಸಿಲ್ ಸ್ಕೆಚ್ ಮಾಡಿರುವುದು ಕಂಡುಬರುತ್ತದೆ. ಗೋಡಿಗೆ ಆಧಾರವಾಗಿ ಕುಳಿತಿರುವ ಮಹಿಳೆಯು ತನ್ನೆರಡೂ ಕೈಗಳನ್ನು ಕೆಳಗಡೆ ಇಟ್ಟುಕೊಂಡು ಎದುರುಗಡೆ ನೋಡಿಕೊಂಡಿರುವಳು ಜೀವಂತಿಕೆಯನ್ನು ಹೊಂದಿದ ಕಣ್ಣುಗಳು ಮುಖ ಹಾಗೂ ಕೈಗಳು ದುಂಡು ದುಂಡಾಗಿ ಕಾಣುವಂತೆ ಪೆನ್ಸಿಲ್‌ನಿಂದ ಕಲಾಕೃತಿಯನ್ನು ಪೂರ್ತಿಗೊಳಿಸಿರುವುದು ಉತ್ತಮವಾಗಿ ಮೂಡಿಬಂದಿದೆ.

1956ರಿಂದ 1962ರ ವರೆಗೆ ಬಹಳಷ್ಟು ನಗ್ನ ಚಿತ್ರಗಳನ್ನು ಕನಿಷ್ಠ ಛಾಯೆಯೊಂದಿಗೆ ಚಿತ್ರಿಸಿರುವುದು ಕಂಡು ಬರುತ್ತದೆ. ಒಟ್ಟಾರೆಯಾಗಿ ರೇಖಾಚಿತ್ರಗಳಲ್ಲಿ ಇವರು HB, 2B, 3B ಪೆನ್ಸಿಲ್‌ಗಳನ್ನು ಸಾಮಾನ್ಯವಾಗಿ ಬಳಸುತ್ತಿದ್ದರೆಂದೂ, ಚಾರ್ಕೂಲ್‌ಗಳನ್ನು ಕೆಲವು ಕಡೆ ಬಳಸಿರುವುದು ಕಂಡು ಬರುತ್ತದೆ. ಪೆನ್ಸಿಲ್ ಸಹಾಯದಿಂದ ನೆರಳು ಬೆಳಕುಗಳ ವಿಶಿಷ್ಠ ವಿನ್ಯಾಸವನ್ನು ಬಳಸಿಕೊಂಡಿರುವದು ಅವರ ಚಿತ್ರ ಕಲಾಕೃತಿಗಳಿಂದ ತಿಳಿದುಬರುತ್ತದೆ.

ಭಾವ ಚಿತ್ರಣ

1) ಯುವತಿಯ ಭಾವಚಿತ್ರ :

ವಿದ್ಯಾರ್ಥಿನಿಯೋರ್ವಳ ಭಾವಚಿತ್ರವನ್ನು 1957ರಲ್ಲಿ ಜಲವರ್ಣ ಮಾಧ್ಯಮದಲ್ಲಿ ರಚಿಸಿದ್ದು, ಈ ಕಲಾಕೃತಿಯಲ್ಲಿ ಮುಖದ ಭಾಗ ನೇರವಾಗಿದ್ದು ದೇಹ ಬಲಭಾಗಕ್ಕೆ ಹೊರಳಿದೆ, ಮುಖದ ಮೇಲಿನ ಗಾಂಭೀರ್ಯತೆ, ಹಣೆಯ

ಮೇಲಿನ ಕುಂಕುಮ, ಜೀವಂತಿಕೆಯನ್ನು ಹೊರಸೂಸುವ ಕಣ್ಣುಗಳು, ನೆರಳು ಬೆಳಕಿನ ವಿನ್ಯಾಸದೊಂದಿಗೆ ಮುಖದಲ್ಲಿಯ ಗುಂಡುತನ ನೈಜವಾಗಿ ಮೂಡಿ ಬಂದಿದೆ. ತಲೆಯ ಮೇಲಿನ ಕೂದಲಿನ ಕಪ್ಪು, ಕಿವಿಯ ಹಿಂದುಗಡೆ ಇಳಿಬಿಟ್ಟ ಜಡೆಯು ಮುಖದ ಅಂದವನ್ನು ಇಮ್ಮಡಿಗೊಳಿಸಿದ್ದು ಜಲ ವರ್ಣದಲ್ಲಿ ವಿಶಿಷ್ಠವಾಗಿ ಬಳಸಿರುವುದು ಕಂಡು ಬರುತ್ತದೆ ಕೊರಳಲ್ಲಿ ಸರವಿದ್ದು ನೀಲಿಬಣ್ಣದ ರವಿಕೆ, ಕೆಂಪು ಬಣ್ಣದ ಸೀರೆಯಲ್ಲಿಯ ನೆರಿಗೆಗಳು, ನೆರಳು ಬೆಳಕಿನ ಪ್ರಮಾಣ ತೋರಿಸಿದ್ದು ಯುವತಿಯ ಭಾವಚಿತ್ರ ಸುಂದರವಾಗಿ ಮೂಡಿಬಂದಿದೆ ಇದನ್ನು ಪೇಪರನಲ್ಲಿ ಮಾಡಲಾಗಿದೆ.

2) ಮಹಿಳೆಯ ಭಾವಚಿತ್ರ :

ಕೆ.ಬಿ.ಕುಲಕರ್ಣಿ ಅವರು ಕಪ್ಪು ಬಣ್ಣದ ಮಹಿಳೆಯೋರ್ವಳ ತೈಲ ಚಿತ್ರವನ್ನು 1951ರಲ್ಲಿ ಬರೆದಿದ್ದು. ಮಹಿಳೆಯ ಮುಖದ ನೇರವಾದನೋಟ, ಗಾಢವಾದ ನೆರಳು ಬೆಳಕನ್ನು ತೋರಿಸಿ ಕಲಾಕೃತಿಗೆ ಹೆಚ್ಚಿನ ಮೆರಗನ್ನು ನೀಡಿರುವರು. ಭಾವಚಿತ್ರದ ಹಿನ್ನೆಲೆಯಲ್ಲಿ ಹಳದಿ ಬಣ್ಣದ ಲೇಪನವಿದೆ. ಈ ಮಹಿಳೆಯು ಗಂಭೀರವಾಗಿದ್ದು ಎದುರು ಗಡೆ ನೋಡುತ್ತಿರುವಳು ಕಪ್ಪು ವರ್ಣದ ಮಹಿಳೆಯು ಗುಂಡಾದ ಮುಖ ಗುಂಡುತನದೊಂದಿಗೆ ವಿಶಿಷ್ಠವಾಗಿ ಬೆಳಕಿನ ಭಾಗವನ್ನು ತೋರಿಸಲಾಗಿದೆ. ಇಲ್ಲಿ ವರ್ಣಗಳ ಬಳಕೆಯೂ ವಿಶಿಷ್ಠವಾಗಿ ಮೂಡಿಬಂದಿದೆ. ಹಳದಿ ಮಿಶ್ರಿತ ಬಿಳಿ ವರ್ಣದರವಿಕೆ, ಕೆಂಪು ವರ್ಣದ ಸೀರೆ ಕಪ್ಪಾಗಿ ಗಾಢತೆಯೊಂದಿಗೆ ಇರುವ ನೆರಿಗೆಗಳು ಉತ್ತಮವಾಗಿ ಮೂಡಿಬಂದಿವೆ, ತಲೆಯ ಕಪ್ಪು ಕೂದಲುಗಳು, ಕೆಳಗಡೆ ಇಳಿಬಿದ್ದ ಜಡೆ, ಮಹಿಳೆಯ ಭಾವಚಿತ್ರವನ್ನು ಆವರಣದಿಂದ ಮುಂದಕ್ಕೆ ತಂದಿರುವ ಅನುಭವವಾಗುತ್ತದೆ. ಹಿನ್ನೆಲೆಯಾಗಿ ಹಳದಿ ಮಿಶ್ರಿತ ಬೆಳಕಿನ ಭಾಗವು ಇದಕ್ಕೆ ಪೂರಕವಾಗಿದೆ. ಈ ಕಲಾಕೃತಿಯಲ್ಲಿ ಮೈವಳಿಕೆಯೂ ವಿಶಿಷ್ಠವಾಗಿ ಮೂಡಿಬಂದಿದೆ. ಈ ಕಲಾಕೃತಿಯು 19" x 14" ಅಳತೆಯ ಕ್ಯಾನ್ವಾಸದಲ್ಲಿ ಮಾಡಲಾಗಿದೆ.

3) ವಿದ್ಯಾರ್ಥಿನಿಯೋರ್ವಳ ಭಾವಚಿತ್ರ :

ಕೆ.ಬಿ.ಕುಲಕರ್ಣಿ ಅವರು ತಮ್ಮ ವಿದ್ಯಾರ್ಥಿಗಳನ್ನೇ ಹೆಚ್ಚಾಗಿ ರೂಪದರ್ಶಿ ಯಾಗಿ ಬಳಸಿಕೊಳ್ಳುತ್ತಿದ್ದರು. ಅಂತೆಯೇ, ಇಲ್ಲಿ ಯುವತಿಯ ಎಡಪಾರ್ಶ್ವ ನೋಟದಲ್ಲಿ ನೋಡುತ್ತಿರುವ ದೃಶ್ಯವಾಗಿದ್ದು ಇದನ್ನು ತೈಲವರ್ಣದಲ್ಲಿ ರಚಿಸಲಾಗಿದೆ. ಅಗಲವಾದ ಮುಖ, ಜೀವಂತಿಕೆಯನ್ನು ಹೊರಸೂಸುವ ಕಣ್ಣುಗಳು, ಗುಂಡು ಗುಂಡಾದ ಮೂಗು ಗಲ್ಲಗಳು ಹಾಗೂ ಹಣೆಯ ಮೇಲಿನ ಚಿಕ್ಕದಾದ ಕುಂಕುಮದ ಬೊಟ್ಟು ಮುಖದ ಅಂದವನ್ನು ಹೆಚ್ಚಿಸಿದ್ದು ಸೂಕ್ತವಾದ ನೆರಳಿನೊಂದಿಗೆ ಬಿಳಿಯ ಬಣ್ಣದ ವಿದ್ಯಾರ್ಥಿನಿಯ ಚಿತ್ರವನ್ನು ಸುಂದರವಾಗಿ ಬಿಡಿಸಿರುವರು. ಕಪ್ಪು ತಲೆಯ ವರ್ಣ ಹಾಗೂ ಹಿಂದುಗಡೆ ಎರಡು ಹೆಣಲುಗಳನ್ನು ಇಳಿಬಿಟ್ಟಿದ್ದು ಕೆಂಪು ವರ್ಣದ ರಿಬ್ಬನ್ ಹಾಕಿಕೊಂಡಿದ್ದು ಬಿಳಿಯ ರವಿಕೆ ಹಾಗೂ ಕೆಂಪು ವರ್ಣದ ಸೀರೆಯ ನೆರಿಗೆಗಳಿಂದ ಪೂರ್ಣಗೊಳಿಸಿರುವ

ಭಾವಚಿತ್ರದ ಹಿನ್ನೆಲೆಯಲ್ಲಿ ಹಳದಿ ಮತ್ತು ಕಂದು ಗೆಂಪು ಬಣ್ಣದ ತಿಳಿ ಮಿಶ್ರಣವನ್ನು ಬಳಸಿರುವುದು ಕಂಡು ಬರುತ್ತದೆ. ಒಟ್ಟಾರೆ ಜೀವಂತಿಕೆಯನ್ನು ಹೊಂದಿದ ಈ ಭಾವಚಿತ್ರ ಅಂದವಾಗಿ ಮೂಢಿಬಂದಿದೆ. ಈ ಕಲಾಕೃತಿಯನ್ನು 15" x 12" ಅಳತೆಯ ಕ್ಯಾನ್ವಾಸದಲ್ಲಿ ರಚಿಸಿರುವರು.

ವ್ಯಕ್ತಿಚಿತ್ರಣ :

ಕೆ.ಬಿ.ಕುಲಕರ್ಣಿ ಅವರು ವಯಸ್ಸಾದ ರೈತನ ವ್ಯಕ್ತಿ ಚಿತ್ರವನ್ನು ತೈಲವರ್ಣದಲ್ಲಿ ಮಾಡಿದ್ದು, ತಲೆಯ ಮೇಲೆ ಹಳದಿರುಮಾಲು ಅರ್ಧತೋಳಿನ ಬಿಳಿ ಅಂಗಿ, ಕೆಳಗಡೆ ಬಿಳಿಯ ಧೋತರ ಇವುಗಳಲ್ಲಿಯ ನಿರಿಗೆಗಳ ವಿನ್ಯಾಸ ಇಲ್ಲಿ ನೈಜವಾಗಿ ಮೂಡಿಬಂದಿವೆ. ಗೋಡೆಗೆ ಆಧಾರವಾಗಿ ಕುಳಿತಿರುವ ವ್ಯಕ್ತಿ ಎದುರುಗಡೆ ಏನನ್ನೋ ನಿರೀಕ್ಷಿಸುತ್ತ ಗಂಭೀರವಾಗಿ ಕುಳಿತಿರುವನು ನೆರಳು ಬೆಳಕಿನ ವರ್ಣ ವಿನ್ಯಾಸದೊಂದಿಗೆ ಸ್ಪಷ್ಟವಾಗಿ ಮೂಢಿ ಬಂದಿದೆ. ಮಡಚಿರುವ ಬಲಗಾಲಿನ ಮೇಲೆ ಇರುವ ಬಲಗೈಯಲ್ಲಿ ಕಟ್ಟಿಗೆಯ ತುಂಡನ್ನು ಹಿಡಿದಿದ್ದು, ಎಡಗೈಯನ್ನು ಎಡಗಾಲ ಮೊಳಕಾಲ ಮೇಲೆ ಇಟ್ಟುಕೊಂಡು ಎದುರುಗಡೆ ನೋಡುತ್ತ ಕುಳಿತಿರುವನು. ಇಲ್ಲಿ ಬರುವ ಬಟ್ಟೆಗಳು ಹಾಗೂ ವ್ಯಕ್ತಿಯ ಅಂಗಾಂಗಗಳು ಪ್ರಮಾಣಬದ್ಧವಾಗಿದ್ದು ವಿಶಿಷ್ಠವಾದ ನೆರಳು ಬೆಳಕುಗಳೊಂದಿಗೆ ವರ್ಣಗಳ ಬಳಕೆ ಉತ್ಕೃಷ್ಟವಾಗಿದೆ. ಹಿನ್ನೆಲೆಯಲ್ಲಿ, ಹಸಿರು ಹಾಗೂ ಹಳದಿ ವರ್ಣಗಳ ಸಮ್ಮಿಲನವಿದ್ದರೆ ಎದುರುಗಡೆ ಕಂದುಗೆಂಪು ಹಾಗೂ ನೀಲಿ ವರ್ಣಗಳ ಮಿಶ್ರಣವಿದೆ. ಕೆಳಗಡೆ ಕಂದು ಗೆಂಪು ಬಣ್ಣವನ್ನು ಬಳಸಲಾಗಿದೆ. ಈ ಕಲಾಕೃತಿಯನ್ನು 1960ರಲ್ಲಿ ರಚಿಸಲಾಗಿದೆ.

ಹೀಗೆ ಹಲವಾರು ಭಾವಚಿತ್ರಗಳನ್ನು ಮತ್ತು ವ್ಯಕ್ತಿಚಿತ್ರಗಳನ್ನು ರಚಿಸಿದ್ದು, ರೇಖಾಚಿತ್ರ ಜಲವರ್ಣ ಹಾಗೂ ತೈಲ ವರ್ಣಗಳಲ್ಲಿ ಕಲಾಕೃತಿಗಳನ್ನು ಪೂರ್ತಿಗೊಳಿಸಿರುವರು. ಪೇಪರ್ಸ್ ಕ್ಯಾನ್ವಾಸ್ ಹಾಗೂ ಹಾರ್ಡಬೋರ್ಡಗಳ ಮೇಲೆ ಚಿತ್ರಿಸಿರುವರು.

ಸಂಯೋಜನಾ ಚಿತ್ರಗಳು

1) ನಿದ್ರಿಸುತ್ತಿರುವ ಮಹಿಳೆ :

ಈ ಸಂಯೋಜನಾ ಚಿತ್ರದಲ್ಲಿ ಮಹಿಳೆಯೋರ್ವಳು ಬಲಗೈ ಮಡಿಚಿಕೊಂಡು ತಲೆಗೆ ಆಧಾರವಾಗಿರಿಸಿ ಮಲಗಿರುವ ದೃಶ್ಯವಿದೆ. ಗುಲಾಬಿ ವರ್ಣದರವಿಕೆ, ನೀಲಿ ವರ್ಣದ ಸೀರೆಯನ್ನುಟ್ಟಿದ್ದು, ಮಹಿಳೆಯ ಹಿಂಭಾಗವನ್ನು ಅಂದವಾಗಿ ತೋರಿಸಿದ್ದು, ತಲೆಯ ಕಪ್ಪು ವರ್ಣವನ್ನು ಬಿಟ್ಟರೆ ಉಳಿದ ವರ್ಣಗಳೆಲ್ಲ ಉಜ್ವಲವಾಗಿ ಬೆಳಕನ್ನು ತೋರ್ಪಡಿಸುತ್ತಿದ್ದು, ಹಿನ್ನೆಲೆಯಲ್ಲಿ, ಎಲ್ಲ ವರ್ಣಗಳ ಮಿಶ್ರಣವಿದ್ದರೂ ಬೆಳಕಿನ ಪ್ರಭಾವ ಗಾಢವಾಗಿದ್ದು ನಿದ್ರಿಸುತ್ತಿರುವ ಮಹಿಳೆಯತ್ತಲೇ ನೋಡುಗನ ದೃಷ್ಠಿ ನೆಡುವಂತೆ ಚಿತ್ರಿಸಲಾಗಿದೆ. ಈ ಕಲಾಕೃತಿಯನ್ನು 20" x 30" ಅಳತೆಯ ಕ್ಯಾನ್ವಾಸದಲ್ಲಿ ರಚಿಸಿರುವರು.

2) ಯೋಚನಾಮಗ್ನಳಾದ ಸುಂದರಿ:

ಗೋಡೆಗೆ ಆಧಾರವಾಗಿ ಎಡಗೈಯನ್ನು ದಿಂಬಿನ ಮೇಲಿಟ್ಟು, ದೇಹದ ಭಾರವನ್ನು ಎಡಗಡೆ ಹಾಕಿ ಏನನ್ನೋ ಚಿಂತಿಸುತ್ತ ಕುಳಿತಿರುವ ಚಿತ್ರವಿದೆ ಬಿಳಿಯರವಿಕೆ, ಕೆಂಪು ವರ್ಣದ ಸೀರೆಯನ್ನುಟ್ಟಿದ್ದು ಸೊಂಟದಿಂದ ಕೆಳಗಡೆ ಭಾಗವನ್ನು ಮಾಡದಿದ್ದರೂ, ಯೋಚನಾ ಮಗ್ನಳಾಗಿ ಕುಳಿತಿರುವ ಆಕೆಯ ಮುಖದ ಭಾವನೆಗಳು ಇಡೀ ಚಿತ್ರದ ಕತೆಯನ್ನು ಹೇಳುವಂತಿದೆ. ಈ ಸುಂದರಿಯ ವರ್ಣಗಳು ಹಳದಿ ಮಿಶ್ರಿತ ಕೆಂಪು ವರ್ಣದ ಉಜ್ವಲತೆಯನ್ನು ಹೊರಸೂಸುತ್ತಿದ್ದರೆ ಹಿನ್ನಲೆಯಲ್ಲಿ, ನೀಲಿ ಕೆಂಪು ಮಿಶ್ರಿತ ವರ್ಣಗಳು ಆ ಸುಂದರಿಯನ್ನು ಇನ್ನಷ್ಟು ಅಂದವಾಗಿ ಕಾಣುವಂತೆ ಮಾಡಿದೆ. ಈ ಕಲಾಕೃತಿಯು ಮಿಶ್ರ ಮಾಧ್ಯಮದಲ್ಲಿ ರಚಿಸಿದ್ದು ಜಲವರ್ಣ ಪೆನ್ನು ಹಾಗೂ ಕ್ರೆಯಾನ್ಸ್‌ಗಳ ಬಳಕೆಯನ್ನು ಮಾಡಿದ್ದು ಕಂಡು ಬರುತ್ತದೆ. ಈ ಕಲಾಕೃತಿಯ ಅಳತೆ 15" x 18". ಈ ಕೃತಿಯನ್ನು ಹಳದಿ ಮೌಂಟಬೋರ್ಡಿನಲ್ಲಿ 1992ರಲ್ಲಿ ರಚಿಸಿರುವರು.

3) ನಿದ್ರಾಮಹಿಳೆ:

ದಿಂಬಿಗೆ ತಲೆಯನ್ನಿಟ್ಟು, ತನ್ನೆರಡು ಕೈಗಳನ್ನು ದಿಂಬಿಗೆ ಆವರಿಸಿದ್ದು ಬೋರಲಾಗಿ ಮಲಗಿರುವ ಮಹಿಳೆಯ ಚಿತ್ರವನ್ನು ಬರೆದಿರುವರು. ಇದೊಂದು ತೈಲವರ್ಣದ ಚಿತ್ರವಾಗಿದ್ದು ವಿಶೇಷವಾಗಿ ಈ ಕಲಾಕೃತಿಯಲ್ಲಿ ಗುಲಾಬಿ ಮಿಶ್ರಿತ ಕಪ್ಪುವರ್ಣವನ್ನು ಬಳಸಲಾಗಿದೆ. ನೆರಳು ಬೆಳಕಿನ ವಿನ್ಯಾಸ ವಿಶಿಷ್ಟವಾಗಿ ಮೂಡಿಬಂದಿದ್ದು, ಗಾಢವಾಗಿ ನಿದ್ರೆಯಲ್ಲಿರುವ ಅನುಭವ ನೋಡುಗನಿಗೆ ಆಗುವುದು. ಸಂಪೂರ್ಣ ವ್ಯಕ್ತಿಯನ್ನು ತೋರಿಸದೇ, ವ್ಯಕ್ತಿಯ ಔಚಿತ್ಯಭಾಗವನ್ನು ಮಾತ್ರ ತೋರಿಸಿದ್ದು ಮಿತವಾದ ವರ್ಣಗಳ ಸಮ್ಮಿಲನ, ಸೂಕ್ತವಾದ ನೆರಳು ಬೆಳಕಿನ ವೈಶಿಷ್ಟ್ಯದಿಂದಾಗಿ ಸಂಯೋಜನಾ ಚಿತ್ರವು ವಿಶಿಷ್ಠವಾಗಿ ಮೂಢಿಬಂದಿದೆ. ಈ ಕಲಾಕೃತಿಯನ್ನು 22" x 32" ಅಳತೆಯ ಕ್ಯಾನ್ವಾಸ್‌ದಲ್ಲಿ ರಚಿಸಲಾಗಿದೆ.

4) ನಗ್ನ ಸುಂದರಿ:

ಕೆ.ಬಿ.ಕುಲಕರ್ಣಿ ಅವರು ನಗ್ನ ಸುಂದರಿಯ ವ್ಯಕ್ತಿಚಿತ್ರವನ್ನು ರಚಿಸಿದ್ದು ಮುಂಬೈದ ಜೆ.ಜೆ.ಕಲಾ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವಾಗ. ನಗ್ನ, ಅರೆನಗ್ನ ರೂಪದರ್ಶಿಗಳನ್ನು ಎದುರಿಗೆ ಕೂಡ್ರಿಸಿ ಪೂರ್ಣ ಪ್ರಮಾಣದ ಚಿತ್ರಗಳನ್ನು ರಚಿಸಿದ್ದಾರೆ ಬಹುಶಃ ಅವುಗಳಲ್ಲಿ ನಗ್ನ ಸುಂದರಿಯ ಕಲಾಕೃತಿಯೂ ಒಂದಾಗಿದೆ ಎಂದು ತಿಳಿದುಬರುತ್ತದೆ. ಈ ಕಲಾಕೃತಿಯನ್ನು ತೈಲವರ್ಣದಲ್ಲಿ ರಚಿಸಿದ್ದಾರೆ ಹಾಸಿಗೆಯೊಂದರ ಮೇಲೆ ಸುಂದರಿಯು ತನ್ನ ಮೊಳಕಾಲುಗಳನ್ನು ಹಿಂಬದಿಗೆ ಮಡಿಚಿಕೊಂಡು ನಗ್ನವಾಗಿ ಕುಳಿತಿರುವಳು. ಸುಂದರಿಯು ಎಡಗಡೆ ನೋಡುತ್ತಿದ್ದು ಬಲಗೈ ತನ್ನ ತೊಡೆಗಳ ಮೇಲೆ ಅಡ್ಡಲಾಗಿ ಇಟ್ಟುಕೊಂಡಿದ್ದು ಎಡಗೈ ಕೆಳಗಡೆ ಇರುವ ಹಾಸಿಗೆಯ ಮೇಲೆ ಇಟ್ಟಿರುವಳು. ಬೆತ್ತಲೆ ಆಗಿರುವ ಮಹಿಳೆಯ ತೊಡೆಯ ಮೇಲೆ ಕೆಂಪು ವರ್ಣದ ಬಟ್ಟೆಯನ್ನು ಅಡ್ಡಲಾಗಿ ಹಾಕಿದ್ದು, ಸುಂದರಿಯ

ತೆರೆದ ಎದೆ ಹಾಗೂ ಮುಖ ಮತ್ತು ಬುಜದ ಹಿಂದುಗಡೆಯಲ್ಲಿ ಕೆಂಪು ರಿಬ್ಬನ್ ಹೂವಿನ ಆಕಾರದಲ್ಲಿ ಚಿತ್ರಿಸಿದ್ದು ಒಟ್ಟಾರೆ ಚಿತ್ರದ ಸೌಂದರ್ಯವನ್ನು ಇಮ್ಮಡಿಗೊಳಿಸಿದೆ. ಈ ಸುಂದರಿಯ ಹಿಂದುಗಡೆ ಸಮುದ್ರದ ನೀರು ದಡದಲ್ಲಿ ಮರಳು ಹಿಂಬದಿಗೆ ಆಕಾಶದಲ್ಲಿಯ ಮೋಡಗಳು ಒಂದಕ್ಕೊಂದು ಪೂರಕವಾಗಿ ಸಂಯೋಜಿಸಲ್ಪಟ್ಟಿವೆ. ಒಟ್ಟಾರೆಯಾಗಿ ಈ ಕಲಾಕೃತಿಯು ಸಮುದ್ರದ ದಡದಲ್ಲಿ ಬೆತ್ತಲೆಯಾಗಿ ಕುಳಿತಿರುವ ಸುಂದರಿಯ ಕಲಾಕೃತಿ ಆಗಿದ್ದು ಮುಖದಲ್ಲಿ ಗಾಂಭೀರ್ಯತೆ ಪ್ರಮಾಣಬದ್ಧ ಅಂಗಾಂಗಗಳಲ್ಲಿಯ ನೆರಳು ಬೆಳಕುಗಳ ವಿನ್ಯಾಸ ಅಂಗರಚನಾ ಶಾಸ್ತ್ರದ ಪೂರ್ಣ ಪ್ರಮಾಣದ ಪರಿಕಲ್ಪನೆ ಈ ಕಲಾಕೃತಿಯಲ್ಲಿದೆ. ಈ ಕಲಾಕೃತಿಯನ್ನು 24" x 36" ಅಳತೆಯ ಕ್ಯಾನ್ವಾಸ್‌ದಲ್ಲಿ ತೈಲವರ್ಣದಲ್ಲಿ ರಚಿಸಲಾಗಿದೆ.

5) ಕಲ್ಪನಾತರಂಗದಲ್ಲಿರುವ ಮಹಿಳೆ:

ಈ ಕಲಾಕೃತಿಯನ್ನು 1991ರಲ್ಲಿ ತೈಲವರ್ಣದಲ್ಲಿ ಕ್ಯಾನ್ವಾಸ್ ಮೇಲೆ ರಚಿಸಲಾಗಿದ್ದು, ವಿಚಾರಮಾಡುತ್ತ ಕುಳಿತಿರುವ ಮಹಿಳೆಯ ಭಾವನೆಗಳನ್ನು ಈ ಕಲಾಕೃತಿಯಲ್ಲಿ ಹಿಡಿದಿಡಲಾಗಿದೆ. ಮೊಳಕಾಲನ್ನು ಮಡಚಿಕೊಂಡು, ತನ್ನ ಬಲಗೈಯನ್ನು ಗದ್ದಕ್ಕೆ ತಾಗಿಸಿ, ಕೆಳಗಡೆ ನೋಡುತ್ತಾ ಕುಳಿತಿರುವ ಭಂಗಿಯಾಗಿದ್ದು ಚಿಂತನೆಯಲ್ಲಿ ತೊಡಗಿದ ಭಾವನೆಗಳು ಅವಳ ಮುಖದಲ್ಲಿ ಕಾಣುತ್ತಿದ್ದು ಅವಳು ತೊಟ್ಟಿರುವ ರವಿಕೆ ಹಾಗೂ ಸೀರೆಗಳು ಗ್ರೇ ವರ್ಣದ ಸಿಲ್ಕ್ ಬಟ್ಟೆಯಂತೆ ಮೈವಳಿಕೆಯನ್ನು ತೋರಿಸಿದ್ದು, ಬಟ್ಟೆಯಲ್ಲಿಯ ನೆರಿಗೆಗಳು, ನೆರಳು ಬೆಳಕಿನ ವಿನ್ಯಾಸವನ್ನು ಸಮರ್ಥವಾಗಿ ತೋರ್ಪಡಿಸಿರುವರು. ತಲೆಯ ಕೂದಲುಗಳನ್ನು ನೈಜವಾಗಿ ಚಿತ್ರಿಸಿದ್ದು ಕೆಂಪು ಹಾಗೂ ಬಿಳಿಮಿಶ್ರಿತ ಕಪ್ಪು ವರ್ಣದ ತಲೆಗೂದಲು ಸುಂದರವಾಗಿದ್ದು ಮಹಿಳೆಯ ಸುಂದರತೆಯನ್ನು ಇಮ್ಮಡಿ ಗೊಳಿಸಿವೆ. ಮಹಿಳೆಯ ಹಿನ್ನೆಲೆಯಲ್ಲಿಯೂ ಗ್ರೇ ಮಿಶ್ರಿತ ಕಂದು ಗೆಂಪು ವರ್ಣವನ್ನು ಬಳಸಿದ್ದು ತೈಲವರ್ಣವನ್ನು ಉತ್ಕೃಷ್ಟವಾಗಿ ಬಳಸಿರುವುದು ಕಂಡುಬರುತ್ತದೆ. ಈ ಕಲಾಕೃತಿಯನ್ನು ಅಳತೆ 22" x 30" ಇರುತ್ತದೆ.

6) ಸಂವೇದನಾಶೀಲ ಮಹಿಳೆ:

ಈ ಕಲಾ ಕೃತಿಯನ್ನು 1995ರಲ್ಲಿ ತೈಲವರ್ಣದಲ್ಲಿ ಕ್ಯಾನ್ವಾಸ್ ಮೇಲೆ ರಚಿಸಿದ್ದು 24" x 36" ಅಳತೆಯ ಕ್ಯಾನ್ವಾಸ ಮೇಲೆ ಚಿತ್ರಿಸಲಾಗಿದೆ ಈ ಕಲಾಕೃತಿಯಲ್ಲಿ ನೆರಳು ಬೆಳಕಿನ ವಿಶಿಷ್ಠ ಪ್ರಯೋಗವನ್ನು ಮಾಡಿದ್ದು ಮಹಿಳೆಯು ಭಾವೋದ್ವೇಗದಿಂದ ಬೋರಲಾಗಿ ಮಲಗಿ ತನ್ನೆರಡೂ ಕೈಗಳನ್ನು ಮಡಿಚಿಕೊಂಡು ಮಧ್ಯದಲ್ಲಿ ಮುಖವನ್ನು ಹುದುಗಿಸಿದ ದೃಶ್ಯ ಸುಂದರವಾಗಿ ಮೂಡಿಬಂದಿದೆ. ಬಿಳಿಬಣ್ಣದ ರವಿಕೆ ಹಾಗೂ ಸೀರೆಯನ್ನುಟ್ಟಿದ್ದು ಈ ಮಹಿಳೆಯ ಹಿನ್ನೆಲೆ ಹಾಗೂ ಮುನ್ನೆಲೆಯಲ್ಲಿ ನೀಲಿಮಿಶ್ರಿತ ಕಂದುಗೆಂಪು ಬಣ್ಣ ಹಾಗೂ ಹಳದಿ ಬಣ್ಣದ ಮಿಶ್ರಣವಿರುವದರಿಂದ ಮಹಿಳೆಯ ಸಂವೇದನೆ ಸ್ಪಂದಿಸಿದ ವರ್ಣಗಳು ಉತ್ಕೃಷ್ಟವಾಗಿ ಮೂಡಿಬಂದಿದೆ.

7) ಕಾಯುತ್ತ ನಿಂತಿರುವ ಸುಂದರಿ:

ಮನೆಯ ಬಾಲ್ಕನಿಯೊಂದರಲ್ಲಿ ನಿಂತು ಹೊರಗಡೆಯಲ್ಲಿ ಏನನ್ನೋ ನಿರೀಕ್ಷಿಸುತ್ತ ನಿಂತಿರುವ ಸುಂದರಿಯ ಚಿತ್ರವಿದಾಗಿದೆ. ಕೆ.ಬಿ.ಕುಲಕರ್ಣಿ ಅವರ ಸ್ನೇಹಿತರ ಮಗಳ ಚಿತ್ರವಿದಾಗಿದ್ದು 24" x 32" ಅಳತೆಯುಳ್ಳ ಕ್ಯಾನ್ವಾಸ್ ಮೇಲೆ ತೈಲ ವರ್ಣದ ಚಿತ್ರವನ್ನು ಬರೆಯಲಾಗಿದೆ ಬಾಗಿಲುಗಳಿಗೆ ಆತುಕೊಂಡು ನಿಂತಿರುವ ಯುವತಿ ಬಿಳಿಯದಾದ ಶರ್ಟ್ ಧರಿಸಿದ್ದು ಕಂದುಗೆಂಪು ವರ್ಣದ ಅಡ್ಡ ಪಟ್ಟಿಯೊಂದಿಗೆ ತಿಳಿಗೆಂಪು ವರ್ಣದಲ್ಲಿರುವ ಸ್ಕರ್ಟ್ ಹಾಕಿಕೊಂಡಿದ್ದು, ಎದುರುಗಡೆಯಲ್ಲಿ ಬಾಲ್ಕನಿಯ ಕಟ್ಟೆಗೆಯ ಪಟ್ಟಿಗಳು ಅದರ ಮೇಲುಗಡೆ ಕಪ್ಪಾದ ಬಟ್ಟೆಯನ್ನು ಹಾಕಿದ್ದು ಈ ಕಟ್ಟಡದ ಆಚೆಯಲ್ಲಿ ನೀರು ಬೆಟ್ಟ ಆಕಾಶದಲ್ಲಿ ತಿಳಿನೀಲಿ ವರ್ಣ ಯುವತಿಯ ಸೌಂದರ್ಯವನ್ನು ಇಮ್ಮಡಿಗೊಳಿಸಿದೆ. ಒಟ್ಟಾರೆ ಇವರ ಮನೆಯ ಮತ್ತು ಆವರಣದ ಚಿತ್ರಗಳೇ ಹೆಚ್ಚಾಗಿದ್ದು ಇದು ಮನೆಯಿಂದ ಹೊರಗಡೆಯ ದೃಶ್ಯವಿದಾಗಿದ್ದು ವಿಶೇಷವಾಗಿದೆ.

8) ಟೊಮೆಟೋ ಮಾರುತ್ತಿರುವ ಮಹಿಳೆ:

ಟೊಮೆಟೋ ಮಾರುತ್ತಿರುವ ಮಹಿಳೆಯ ಚಿತ್ರವನ್ನು 20" x 30" ಅಳತೆಯ ಕ್ಯಾನ್ವಾಸ್ ಮೇಲೆ ತೈಲವರ್ಣದಲ್ಲಿ ಚಿತ್ರಿಸಿರುವರು. ಕೆ.ಬಿ.ಕುಲಕರ್ಣಿ ಅವರು ಜನಸಾಮಾನ್ಯರ ವಿಷಯಗಳನ್ನೇ ಚಿತ್ರಿಸಿದ್ದು ಕಾಯಿಪಲ್ಯ ಮಾರುಕಟ್ಟೆಯಲ್ಲಿ ಮಹಿಳೆಯೋರ್ವಳು ದೊಡ್ಡದಾದ ಬುಟ್ಟಿ ತುಂಬಾ ಟೊಮೆಟೋ ತುಂಬಿ ಕೊಂಡಿದ್ದು ಕೆಳಗಡೆ ಟೊಮೆಟೋಗಳು ಬಿದ್ದಿರುವವು. ಎದುರುಗಡೆಯಲ್ಲಿಟ್ಟು ಕೊಂಡಿರುವ ಮಹಿಳೆ ಹಸಿರುವರ್ಣದ ಸೀರೆಯನ್ನುಟ್ಟಿದ್ದು ನೀಲಿ ವರ್ಣದ ರವಿಕೆ ಅಂಚುಗಳಿಗೆ ಹಳದಿ ಮತ್ತು ಕೆಂಪು ವರ್ಣದ ಪಟ್ಟಿಗಳಿದ್ದು ಎಡಗಾಲನ್ನು ಮೇಲ್ಗಡೆ ಮಡಿಚಿದ್ದು ಕೆಳಗಡೆ ಅಡ್ಡಲಾಗಿ ಬಲಗಾಲನ್ನು ಮಡಿಚಿಕೊಂಡು ಕುಳಿತಿರುವಳು ಕೈಯಲ್ಲಿ ಬಳೆಗಳು ಕೊರಳಲ್ಲಿ ಒಡವೆಗಳನ್ನು ಧರಿಸಿದ್ದು ಮಡಿಚಿಕೊಂಡಿರುವ ಎಡಗಾಲನ್ನು ಎರಡೂ ಕೈಗಳು ಸುತ್ತುವರಿದಿವೆ. ಹಿನ್ನೆಲೆಯಲ್ಲಿ, ತಿಳಿನೀಲಿ ವರ್ಣವನ್ನು ಬಳಸಿದ್ದು ಬುಟ್ಟಿಯಲ್ಲಿರುವ ಟೊಮೆಟೋ ಹಾಗೂ ಮಹಿಳೆ ಆಕರ್ಷಕವಾಗಿ ಮೂಡಿಬಂದಿದೆ.

ಒಟ್ಟಾರೆಯಾಗಿ, ಇವರು ರಚಿಸಿದ ಸಂಯೋಜನಾ ಚಿತ್ರಗಳು ಸಾಮಾನ್ಯ ವಿಷಯಗಳಾಗಿದ್ದು ಜನ ಸಾಮಾನ್ಯರಿಗೂ ಅರ್ಥವಾಗುವಂತಿದ್ದು ನಿದ್ರಿಸುತ್ತಿರುವ ಮಹಿಳೆ, ವಿಚಾರಿಸುತ್ತಿರುವ ಮಹಿಳೆ, ಆವೇಶಕ್ಕೊಳಗಾದ ಮಹಿಳೆ, ಭಾವಾವೇಶ ಗೊಂಡಿರುವ ಮಹಿಳೆ, ಯಾರಿಗಾಗಿಯೋ ಕಾಯುತ್ತಿರುವ ಮಹಿಳೆ, ಮಾರಾಟ ಮಾಡುತ್ತಿರುವ ಮಹಿಳೆ, ನೀರು ತರುತ್ತಿರುವ ಮಹಿಳೆ, ವಿಶ್ರಾಂತಿ ತೆಗೆದು ಕೊಳ್ಳುತ್ತಿರುವ ವ್ಯಕ್ತಿ ಹೀಗೆ ಇವರ ಸಂಯೋಜನೆಗಳು ರೂಪುಗೊಂಡಿವೆ. ಒಟ್ಟಾರೆ, ಸ್ಥಳಾವಕಾಶದ ಬಳಕೆ, ವರ್ಣಗಳ ವಿನ್ಯಾಸ, ಮೈವಳಿಕೆ, ತರಂಗಬದ್ಧತೆ, ಲಯಬದ್ಧತೆ, ಆಕಾರ ಆಕೃತಿ, ತಂತ್ರಗಾರಿಕೆ ಉತ್ತಮವಾಗಿ ಮೂಡಿಬಂದಿದೆ.

ನಿಸರ್ಗ ಚಿತ್ರಗಳು

1) ಹಿಂದಲ್ಯಾ ಹಳ್ಳಿಯ ದೃಶ್ಯ:

15" x 22" ಅಳತೆಯ ಪೇಪರ್ ಮೇಲೆ ಜಲವರ್ಣದಲ್ಲಿ ಚಿತ್ರಿಸಲಾಗಿದ್ದು ಇದೊಂದು ಹಿಂದಲ್ಯಾ ಹಳ್ಳಿಯ ದೃಶ್ಯವಾಗಿದ್ದು ಇದನ್ನು 1977ರಲ್ಲಿ ರಚಿಸಲಾಗಿದೆ. ಈ ಹಳ್ಳಿಯ ಅರೆಬರೆಬಿದ್ದ ಗೋಡೆಗಳು, ಗುಡಿಸಲುಗಳು ವಿಶಾಲವಾದ ಬೀದಿ, ಬೀದಿಯ ಮಧ್ಯದಲ್ಲಿ ಗುಡಿಸಲುಗಳಿಗೆ ಸಮನಾಗಿ ಅಥವಾ ವರ್ಣ ಸಮತೋಲನಕ್ಕಾಗಿ ಬಳಸಿಕೊಂಡಿರುವ ಬಕೀಟು ಮತ್ತು ತಂಬಿಗೆಯನ್ನು ತೋರಿಸಿದ್ದು ಹಾಗೂ ಬಲಗಡೆಯಲ್ಲಿ ಗುಡಿಸಿಲು ಮುಂದುಗಡೆ ಕುಳಿತಿರುವ ಮಹಿಳೆ ಏನನ್ನೇ ತೊಳೆಯುತ್ತಿರುವ ದೃಶ್ಯವು ವಿಶಿಷ್ಠವಾಗಿ ಮೂಡಿಬಂದಿದೆ. ಪೇಪರನ್ನು ತೋಯಿಸಿ, ಹಸಿ ಇರುವಾಗಲೇ ವರ್ಣಗಳನ್ನು ಬಳಸಿರುವ ತಂತ್ರ ಹಾಗೂ ವರ್ಣಗಳ ಸಮತೋಲನ ಹೊಂದಾಣಿಕೆ ನೆರಳು ಬೆಳಕುಗಳ ಕಲ್ಪನೆ ಉತ್ತಮವಾಗಿ ಮೂಡಿಬಂದಿದೆ.

2) ನಾನು ವಾಸಿಸುವ ಹಳ್ಳಿಯ ದೃಶ್ಯ:

18" x 24" ಅಳತೆಯ ಬೋರ್ಡ ಮೇಲೆ ಅಕ್ರ್ಯಾಲಿಕ್ ವರ್ಣಗಳನ್ನು ಬಳಸಿ ಚಿತ್ರಿಸಿದ್ದು ನಾನು ವಾಸಿಸುವ ಹಳ್ಳಿಯಲ್ಲಿಯ ಮನೆಯೊಂದನ್ನು ಬೆಳಗಿನ ಜಾವದ ದೃಶ್ಯವಿದಾಗಿದೆ. ಈ ಹಳ್ಳಿಯ ಗುಡಿಸಲೊಂದರ ಚಿತ್ರವಾಗಿದ್ದು ನೀಲಿ, ಹಳದಿ ಹಸಿರು ವರ್ಣಗಳು ಪ್ರಮುಖವಾಗಿರುವ ಈ ಚಿತ್ರದಲ್ಲಿ ಗುಡಿಸಲು ಮುಂದು ಬಾಗಿಲು ಎದುರುಗಡೆ ಕಂಬಗಳು ಅವುಗಳಿಗೆ ಕಟ್ಟಿದ ಹಗ್ಗಕ್ಕೆ ನೇತಾಕಿರುವ ಬಟ್ಟೆಗಳು ಎದ್ದು ಕಾಣುವಂತೆ ಕೆಂಪು ನೀಲಿವರ್ಣಗಳ ಬಳಕೆ ಮಾಡಿದ್ದು ಅವುಗಳಿಗೆ ಸಮತೋಲನವಾಗಿ ಬರುವಂತೆ ಹುಲ್ಲಿನಿಂದ ಮಾಡಿದ ಮಧ್ಯದಲ್ಲಿರುವ ಕಟ್ಟಿಗೆಗಳು ಒಂದನ್ನೊಂದು ಪೋಣಿಸಿದಂತೆ ಹೆಣಿದು ಎದುರಗಡೆ ಇಟ್ಟಿರುವ ದೃಶ್ಯ ಅವುಗಳಿಗೆ ತಾಗಿರುವ ಮಣ್ಣಿನ ಗುಡ್ಡೆ ಇದ್ದು ಬಾಗಿಲು ಎದುರುಗಡೆಯಲ್ಲಿ ಎರಡು ಕಾಲಿಯಾದ ಬುಟ್ಟೆಗಳು ಬ್ಯಾರಲ್‌ಗಳಿದ್ದು, ಎದುರಲ್ಲಿ ಹಳದಿ ಮತ್ತು ಬಿಳಿ ವರ್ಣಗಳಿಂದ ಹುಲ್ಲಿರುವ ಅನುಭವ ಬರುವಂತೆ ಚಿತ್ರಿಸಲಾಗಿದ್ದು ಇದನ್ನು ಅವರ ಸ್ಟುಡಿಯೋದಲ್ಲಿಯೇ ಕುಳಿತು 1989ರಲ್ಲಿ ರಚಿಸಿರುವರು ನನ್ನ ಹಳ್ಳಿಯ ಜನ ಜೀವನ ಕುರಿತು ಚಿತ್ರಿಸುವ ಬಯಕೆಯೊಂದಿಗೆ ಈ ಕೃತಿಯನ್ನು ಮಾಡಿರುವುದಾಗಿ ಹೇಳುತ್ತಿದ್ದರು.

3) ದೊಡ್ಡದಾದ ಬಂಡೆಗಲ್ಲು ಹಾಗೂ ಕಪ್ಪು ಮೋಡಗಳು:

ಈ ನಿಸರ್ಗ ಚಿತ್ರವನ್ನು 15" x 22" ಅಳತೆಯ ಪೇಪರ ಮೇಲೆ ಜಲವರ್ಣದಲ್ಲಿ ಚಿತ್ರಿಸಲಾಗಿದೆ. ಇದೊಂದು ನದಿಯ ದಡದಲ್ಲಿರುವ ದೊಡ್ಡದಾದ ಬಂಡೆಗಲ್ಲು ಹಾಗೂ ಹಿಂದುಗಡೆ ಕಪ್ಪು ಮೋಡಗಳು ಆವರಿಸಿದ್ದು ಈ ಕಲಾಕೃತಿಯಲ್ಲಿ ಬೆಳಕಿನ ಭಾಗವನ್ನು ವಿಶಿಷ್ಠವಾಗಿ ತೋರಿಸಲಾಗಿದ್ದು ಪೇಪರಿನ ಬಿಳಿಭಾಗವನ್ನು ಮಧ್ಯದಲ್ಲಿ ಹಾಗೇ ಉಳಿಸಿಕೊಂಡಿದ್ದು ಆ ಬಿಳಿಯ ಪೇಪರನ ಭಾಗದಲ್ಲಿಯೇ ಆಕಾಶ ಮತ್ತು ನೀರನ್ನು ಪ್ರತ್ಯೇಕಿಸಿದ್ದು ವಿಶಿಷ್ಠವಾಗಿ ಮೂಡಿಬಂದಿದೆ.

ಪೇಪರನ್ನು ತೋಯಿಸಿ, ಹಸಿ ಇರುವಾಗಲೇ ಜಲವರ್ಣಗಳನ್ನು ಬಳಸಿ ಕಂದು ಗೆಂಪು ಬಣ್ಣದ ದೊಡ್ಡದಾದ ಬಂಡೆಗಲ್ಲು, ಕಪ್ಪು ಮೋಡಗಳನ್ನು ನೀಲಿ ಮಿಶ್ರಿತ ಕಂದು ಗೆಂಪು ಬಣ್ಣದಲ್ಲಿ ತೋರಿಸಿದ್ದು, ಮುಂದುಗಡೆ ಮರಳು ಅಲ್ಲಲ್ಲಿ ಕಲ್ಲುಗಳು ನೆರಳು ಬೆಳಕಿನೊಂದಿಗೆ ಸುಂದರವಾಗಿ ಮೂಡಿಬಂದಿದೆ.

4) ಮರಗಳ ಮಧ್ಯದಲ್ಲಿ ಮನೆ:

ಈ ನಿಸರ್ಗ ಚಿತ್ರವನ್ನು ಮಿಶ್ರ ಮಾಧ್ಯಮದಲ್ಲಿ 11" x 15" ಅಳತೆಯ ಪೇಪರದಲ್ಲಿ ರಚಿಸಲಾಗಿದೆ. ಈ ಕಲಾಕೃತಿಯಲ್ಲಿ ವಿಶೇಷವಾಗಿ ನೀಲಿ ವರ್ಣವನ್ನೇ ಪ್ರಮುಖವಾಗಿಟ್ಟುಕೊಂಡು ಚಿತ್ರಿಸಿದ್ದು, ಮೊದಲು ಜಲವರ್ಣದಲ್ಲಿ ಕಲಾಕೃತಿಯನ್ನು ಮಾಡಿಕೊಂಡು ನಂತರ ನೀಲಿ ಬಾಲಪೆನ್‌ದಿಂದ ರೇಖೆಗಳ ಮುಖಾಂತರ ಸಂಪೂರ್ಣವಾಗಿ ಗುಡಿಸಲು ಮರ, ನೆಲಗಳನ್ನು ಪೂರ್ತಿಗೊಳಿಸಿದ್ದು ಕಂಡುಬರುತ್ತದೆ ಇದರಲ್ಲಿಯೂ ಕೂಡಾ ವಿಶಿಷ್ಠವಾಗಿ ಬಿಳಿ ಪೇಪರಿನ ಭಾಗ ಹಾಗೆ ಉಳಿಸಿಕೊಂಡಿದ್ದು ನೀರನ್ನು ವಿಶಿಷ್ಠವಾಗಿ ಬೇರ್ಪಡಿಸಿ ತೋರಿಸಲಾಗಿದೆ. ನೆಲ ಮರಗಳು ಮತ್ತು ಗುಡಿಸಲು ಹಿಂದಿನ ಭಾಗದಲ್ಲಿಯ ಬಿಳಿಯ ವರ್ಣದಿಂದಾಗಿ ಮುಂದಿನ ಭಾಗವು ಸುಂದರವಾಗಿ ಮೂಡಿಬಂದಿದೆ ನೀಲಿ ಮಿಶ್ರಿತ ಕಪ್ಪು ಭಾಗ ಮುಂದುಗಡೆಯಲ್ಲಿದ್ದರೆ ಹಿಂದುಗಡೆ ಹೋದಂತೆ ನೀಲಿ ಮತ್ತು ಹಳದಿ ಮಿಶ್ರಿತ ವರ್ಣಗಳು ಬಳಕೆಯಾಗಿದ್ದು ಇವುಗಳ ಹಿಂದುಗಡೆಯಲ್ಲಿ ಬಿಳಿಮಿಶ್ರಿತ ನೀಲಿವರ್ಣದ ಆಕಾಶ ಮತ್ತು ನೀರಿನ ವರ್ಣಗಳಲ್ಲಿ ಒಟ್ಟಾರೆಯಾಗಿ ಯಥಾ ದರ್ಶನವನ್ನು ತೋರಿಸುತ್ತಿದ್ದು ಈ ಕಲಾಕೃತಿಯು ಸುಂದರವಾಗಿ ಮಿಶ್ರ ಮಾಧ್ಯಮಗಳೊಂದಿಗೆ ಮೂಡಿಬಂದಿದೆ.

ಹೀಗೆ ಹಲವಾರು ನಿಸರ್ಗ ಚಿತ್ರಗಳನ್ನು ರಚಿಸಿದ್ದು ಜಲವರ್ಣ, ತೈಲವರ್ಣ, ಹಾಗೂ ಪೆನ್ ಮತ್ತು ಇಂಕ್‌ಗಳಿಂದ ಪೇಪರ ಕ್ಯಾನ್ವಾಸ್, ಕಾರ್ಡ್ ಬೋರ್ಡಗಳ ಮೇಲೆ ಹೀಗೆ ವಿವಿಧ ಹಂತಗಳಲ್ಲಿ ವಿವಿಧ ರೀತಿಯ ಮಾಧ್ಯಮದಲ್ಲಿ ಚಿತ್ರಗಳನ್ನು ರಚಿಸಿರುವರು.

ಕಲಾ ವಿದ್ಯಾರ್ಥಿಗಳಿಗೆ ಕೆ.ಬಿ.ಕುಲಕರ್ಣಿ ಅವರ ಕಿವಿಮಾತು :

ಕಲೆ ಯಾವ ಯುಗದಲ್ಲಿಯೇ ರಚನೆಗೊಂಡಿರಲಿ ಅದು ಅಸ್ತಿತ್ವದ ಹುಡುಕಾಟ ಮೂಲಭೂತ ಚಿಂತನೆ ಆಗಿದೆ ಎಂಬುದನ್ನು ಮರೆಯಬಾರದು. ವಾಣಿಜ್ಜೀಕರಣಗೊಂಡಿರುವ ಪ್ರಸ್ತುತ ಸಂದರ್ಭದಲ್ಲಿಯೂ ಕಲೆ ಅದರಷ್ಟಕ್ಕೇ ಅದು ಒಂದು ಗುರಿ ಹೊರತು ಇನ್ನೇನನ್ನೂ ಸಾಧಿಸಲು ಇರುವ ಮಾರ್ಗವಲ್ಲ ಎಂಬುದನ್ನು ಮನಗಾಣಬೇಕು.

* ಪ್ರಾರಂಭದಲ್ಲಿ ಕಂಡದ್ದನ್ನೆಲ್ಲಾ ಕಾಗದದ ಮೇಲೆ ಗೀಚಿ ಐದಾರು ಶ್ರೇಣಿಯ ಪೆನ್ಸಿಲ್‌ಗಳಿಂದ ಬೇರೆ ಬೇರೆ ಬಣ್ಣದ ಮೇಲ್ಮೈಯ ಕಾಗದ ಬಳಸಿ ಚಿತ್ರಿಸುತ್ತಾ ಹೋಗಿ ಅಂತಿಮವಾಗಿ ಕ್ಯಾನ್ವಾಸ್‌ನಲ್ಲಿ ನೀವೇನು ಚಿತ್ರಿಸಬೇಕೆನ್ನುವುದು ತನ್ನಿಂದ ತಾನೇ ನಿರ್ಧಾರವಾಗುತ್ತಾ ಹೋಗುತ್ತದೆ ಕಲಿಕೆ ಮುಂದುವರಿದಂತೆ ನಿಮಗೆ ಪ್ರಮಾಣಬದ್ಧತೆ ವರ್ಣಗಳ ಆಯಾಮಗಳ ಮೇಲೆ ಹಿಡಿತ ಸಿಗುತ್ತದೆ. ಸಂಗೀತದಲ್ಲಿರುವಂತೆ ಚಿತ್ರಕಲೆಗೂ ಉಗ್ರಸ್ವರೂಪದ ರಿಯಾಜ್ ಮುಖ್ಯ!

* ಕರಾರುವಕ್ಕಾಗಿ ಚಿತ್ರಿಸುವಾಗ ಪ್ರಾಥಮಿಕ ಪಾಠವಾದ ಮೇಲೆ ಕಲಾಕೃತಿಯೊಂದರಲ್ಲಿ ಏನನ್ನು ಸೇರಿಸಿದರೆ ಅಥವಾ ಬಿಟ್ಟರೆ ಉತ್ತಮವಾಗುವುದು ಎನ್ನುವ ಅಂಶಗಳೆಲ್ಲಾ ಹೊಳೆಯುತ್ತವೆ ನಿಮ್ಮದೇ ಶೈಲಿ ಮೈದಾಳಲು ಆರಂಭವಾಗುತ್ತದೆ.
* ಸಾಲ್ವಿಡಾರ್ ಡಾಲಿ ಅವಾಸ್ತವಿಕ ಶೈಲಿಯಲ್ಲಿ ಕೆಲವು ಅದ್ಭುತ ಕಲಾಕೃತಿಗಳನ್ನು ರಚಿಸಿದ. ವಿರೂಪಗೊಳಿಸುವುದನ್ನೇ ತನ್ನ ಶೈಲಿಯನ್ನಾಗಿಸಿ ಪಿಕಾಸೋ ಮಾಡಿಕೊಂಡ ಎನ್ನುವ ಅಂಶಗಳು ನಿಮ್ಮನ್ನು ದಿಕ್ಕುತಪ್ಪಿಸಬಾರದು.
* ನಿಮಗೆ ತೀವ್ರವಾಗಿ ಅನಿಸಿದಾಗ ಮಾತ್ರ ರೂಢಿಗತವಲ್ಲದ ಮೇಲಿನ ಶೈಲಿಗಳನ್ನು ಬಳಸಿ ಎಲ್ಲದಕ್ಕೂ ನಿಮ್ಮ ತೀಕ್ಷ್ಣ ಸಂವೇದನೆ ಸೂಕ್ಷ್ಮಜ್ಞತೆಗಳೇ ಬಂಡವಾಳ ಅವುಗಳ ಅಭಾವದಲ್ಲಿ ಕಲೆಯು ಹುಟ್ಟುವುದಿಲ್ಲ.
* ಸಂವೇದನೆ ಸೂಕ್ಷ್ಮತೆಯ ಚಿಂತನೆಗೆ ನೋಟದ ಕಾಣಿಕೆಯ ಪ್ರಾಮಾಣಿಕತೆಯೂ ತುಂಬಾ ಮುಖ್ಯವಾಗಿರುತ್ತದೆ. ನೀವು ಸತ್ಯದ ಪಕ್ಷಪಾತಿಗಳಾಗಿದ್ದಾಗ ಮಾತ್ರ ಕಲೆಯು ನಿಮಗೆ ಒಲಿಯುತ್ತದೆ. ಉತ್ತಮ ಮನುಷ್ಯನಾಗದೇ ಶ್ರೇಷ್ಠ ಕಲಾವಿದನಾಗುವುದು ಎಂದಿಗೂ ಸಾಧ್ಯವಿಲ್ಲ.
* ನಿಮ್ಮ ವ್ಯಕ್ತಿತ್ವದ ಒಂದು ಅಂಶವೇ ಆಗಿ ಹೊರಹೊಮ್ಮುವ ಕಲೆ, ಸಾಹಿತ್ಯ ತತ್ವಜ್ಞಾನದ ಬಲದೊಂದಿಗೆ ಇನ್ನಷ್ಟು ದೈವಿಕವಾಗಬಲ್ಲದು ಕಲೆಗೂ ಸಾಹಿತ್ಯದ ತಾತ್ವಿಕತೆಗೂ ಅವಿನಾಭಾವ ಸಂಬಂಧವಿದೆ. ಕಲೆಯನ್ನು ದೃಶ್ಯಕಾವ್ಯವೆಂದೂ ಕರೆಯುತ್ತಾರೆ. ನಾನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಕಲೆಸಂಗೀತದಂತೆ ಎನ್ನುತ್ತೇನೆ ಏಕೆಂದರೆ ಸಾಮರಸ್ಯ ಸಮತೋಲನ ಲಯಬದ್ಧತೆ, ತರಂಗಬದ್ಧತೆ ಇಲ್ಲಿಯೂ ಬೇಕಾಗುತ್ತದೆ ಎಂದು ಹೇಳಿರುವರು.

ಈ ಮೇಲಿನ ಎಲ್ಲ ಅಂಶಗಳನ್ನು ಗಮನಿಸಿದಾಗ ಕೆ.ಬಿ.ಕುಲಕರ್ಣಿ ಅವರು ಕಲಾವಿದನಾಗಿ, ಸಾಹಿತಿಯಾಗಿ, ತತ್ವಜ್ಞಾನಿಯಾಗಿ ಹೊರಹೊಮ್ಮಿದ ಅವರ ಅನುಭವದ ನುಡಿಗಳು ನಿಜವಾಗಿಯೂ ಇಂದಿನ ಕಲಾವಿದರಿಗೆ ಮತ್ತು ಕಲಾ ವಿದ್ಯಾರ್ಥಿಗಳಿಗೆ ದಾರಿದೀಪವಾಗಿ ಮೂಡಿಬಂದಿವೆ.

ಕೆ.ಬಿ.ಕುಲಕರ್ಣಿ ಅವರ ಕಲಾಪ್ರದರ್ಶನ ಹಾಗೂ ಸನ್ಮಾನ ಪ್ರಶಸ್ತಿಗಳು:

ಕೆ.ಬಿ.ಕುಲಕರ್ಣಿ ಅವರು ಅನೇಕ ಕಲಾಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿರುತ್ತಾರೆ, ಏಕವ್ಯಕ್ತಿ ಕಲಾ ಪ್ರದರ್ಶನ ಸಮೂಹ ಕಲಾ ಪ್ರದರ್ಶನಗಳು ಕರ್ನಾಟಕ ಲಲಿತ ಕಲಾ ಅಕಾಡೆಮಿಯವರು ನಿಯೋಜಿಸಿರುವ ಚಿತ್ರಕಲಾ ಶಿಬಿರಗಳು, ಪ್ರದರ್ಶನಗಳು ಹಾಗೂ ಸಂಘ ಸಂಸ್ಥೆಯವರು ನಿಯೋಜಿಸುವ ಕಲಾಶಿಬಿರ ಪ್ರದರ್ಶನಗಳಲ್ಲಿ ಇವರು ಭಾಗಿಯಾಗಿದ್ದಾರೆ. ಇವರದು ನಿಸ್ವಾರ್ಥ ಸ್ವಭಾವ, ಹೀಗೆ, ಇವರು ಭಾಗವಹಿಸಿದ ಸಣ್ಣಪುಟ್ಟ ಕಲಾಚಟುವಟಿಕೆಗಳ ದಾಖಲಾತಿಯನ್ನು ತಮ್ಮ ಪರಿಚಯ ಪತ್ರದಲ್ಲಿ ನಮೂದಿಸಿ ಜಂಬ ಕೊಚ್ಚಿಕೊಂಡವರಲ್ಲ ಅವರ ಕುರಿತು ಅಧ್ಯಯನ ಮಾಡುವಾಗ ನಮಗೆ ದೊರೆತ ಮಾಹಿತಿಗಳನ್ನು ಇಲ್ಲಿ ವಿವರಿಸಲಾಗಿದೆ.

ಕೆ.ಬಿ.ಕುಲಕರ್ಣಿ ಅವರು ಕಲಾಚಟುವಟಿಕೆಗಳಲ್ಲಿ ಹೆಚ್ಚಾಗಿ ತಮ್ಮನ್ನು ತೊಡಗಿಸಿಕೊಂಡಿದ್ದು ತಿಳಿದು ಬರುತ್ತದೆ ಅದರಲ್ಲೂ ಹೆಚ್ಚಿನ ಅವಧಿಯನ್ನು ತಮ್ಮ ಶಿಷ್ಯ ವರ್ಗವನ್ನು ಬೆಳೆಸಲು ಅವರಿಗೆ ಕಲೆಯ ಹಿತವನ್ನು ಇಂಗಿಸಿ, ಶಿಷ್ಯರನ್ನು ಉತ್ತುಂಗ ಮಟ್ಟಕ್ಕೆ ತರುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಅವರ ಕೈಯಲ್ಲಿ ಕಲಿತವರು ಇಂದು ರಾಷ್ಟ್ರಮಟ್ಟದಲ್ಲಿ ಬೆಳದಿರುವುದು ಇದಕ್ಕೆ ಸಾಕ್ಷಿಯಾಗಿದೆ.

ಚಿತ್ರಕಲಾ ಪ್ರದರ್ಶನಗಳು:

1984ರಲ್ಲಿ ಕೊಲ್ಹಾಪೂರದಲ್ಲಿ ಏಕವ್ಯಕ್ತಿ ಚಿತ್ರ ಕಲಾಪ್ರದರ್ಶನವನ್ನು ಏರ್ಪಡಿಸಿದಾಗ ಅಲ್ಲಿಯ ಜನಮನಗೆದ್ದ ಕಲಾವಿದರಾಗಿ ಗುರುತಿಸಿಕೊಂಡರು. ಅದೇ ವರುಷದಲ್ಲಿ ಬೆಂಗಳೂರಿನಲ್ಲಿಯೂ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ ಏರ್ಪಡಿಸಿ ಕಲಾಪ್ರೇಮಿಗಳ ಹೃದಯದಲ್ಲಿ ಗುರುತಿಸಿಕೊಂಡ ಕೆ.ಬಿ.ಕುಲಕರ್ಣಿ ಅವರು 1986ರಲ್ಲಿ ಪುಣೆಯಲ್ಲಿ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನವನ್ನು ಏರ್ಪಡಿಸಿದ್ದರು. 1995ರಲ್ಲಿ ಮುಂಬಯಿಯ ಪ್ರತಿಷ್ಠಿತ ಜಹಾಂಗೀರ್ ಆರ್ಟಗ್ಯಾಲರಿಯಲ್ಲಿ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನವನ್ನು ಏರ್ಪಡಿಸಿದ್ದರು. ಇದಲ್ಲದೇ ಹಲವಾರು ಕಡೆಗಳಲ್ಲಿ ಸಮೂಹ ಚಿತ್ರಕಲಾ ಪ್ರದರ್ಶನಗಳನ್ನು ಏರ್ಪಡಿಸಿರುವರು. ಜೊತೆಗೆ ರಾಜ್ಯ ಲಲಿತಕಲಾ ಅಕಾಡೆಮಿ ಚಿತ್ರಕಲಾ ಪ್ರದರ್ಶನದಲ್ಲಿಯೂ ಇವರ ಕಲಾಕೃತಿಗಳು ಪ್ರದರ್ಶನಗೊಂಡಿವೆ. 1999 ಮತ್ತು 2005ರಲ್ಲಿ ಮುಂಬಯಿಯ ಪ್ರತಿಷ್ಠಿತ ಜಹಾಂಗೀರ್ ಆರ್ಟಗ್ಯಾಲರಿಯಲ್ಲಿ ಕೆ.ಬಿ.ಕುಲಕರ್ಣಿ ಅವರ ಕಲಾ ಬದುಕಿನ ಅತ್ಯಂತ ಮಹತ್ವ ಪೂರ್ಣವಾದ ಸಂತೋಷದ ಹಾಗೂ ಹೆಮ್ಮೆ ಪಡುವಂತಹ ಘಟನೆಯಾಯಿತು ಏಕೆಂದರೆ ಕರ್ನಾಟಕ ಮತ್ತು ಮಹಾರಾಷ್ಟ್ರದ ಗಡಿಭಾಗದ ಕಲಾವಿದನೊಬ್ಬನ ಕಲಾಕೃತಿಗಳು ದೇಶದ ಅತೀ ಮುಖ್ಯವಾದ ಸಾಂಸ್ಕೃತಿಕ ಕಲಾತ್ಮಕ ಚಟುವಟಿಕೆಗಳ ಕೇಂದ್ರವಾದ ಮುಂಬೈದಲ್ಲಿ ಪ್ರದರ್ಶನಗೊಂಡಿದ್ದು ಹಾಗೂ ಜನರಿಂದ ಮೆಚ್ಚುಗೆಯನ್ನು ಗಳಿಸಿದ್ದು ಹೆಮ್ಮೆ ಪಡುವ ಸಂಗತಿಯಾಗಿದೆ ಎಂದಿರುವರು.

1972ರಲ್ಲಿ ಕರ್ನಾಟಕ ಸರಕಾರ ಕೃಷ್ಣರಾವ್ ಬಿ. ಕುಲಕರ್ಣಿ ಅವರು ಕಲಾಕ್ಷೇತ್ರಕ್ಕೆ ಸಲ್ಲಿಸಿರುವ ಸೇವೆಯನ್ನು ಗುರುತಿಸಿ ಇವರಿಗೆ ರಾಜ್ಯ ಪ್ರಶಸ್ತಿಯನ್ನು ನೀಡಿತು ಹಾಗೂ ಇವರು ರಚಿಸಿರುವ "ಫಕೀರಾ" ಎಂಬ ಕಲಾಕೃತಿಗೆ ಮೊದಲನೇಯ ಬಹುಮಾನ ದೊರೆಯಿತು.

ಕರ್ನಾಟಕ ರಾಜ್ಯದ ಕಲಾಶಿಕ್ಷಣದ ಸಲಹಾ ಸಮೀತಿಯ ಸದಸ್ಯರಾಗಿ ಸೇವೆ ಸಲ್ಲಿಸಿರುವರು. ಕರ್ನಾಟಕ ಲಲಿತ ಕಲಾ ಅಕಾಡೆಮಿಯ ಸದಸ್ಯರಾಗಿಯೂ ಸೇವೆ ಸಲ್ಲಿಸಿರುವರು. ಹಲವಾರು ಚಿತ್ರಕಲಾ ಶಾಲೆಗಳಿಗೆ ಭೇಟಿನೀಡಿ ಪ್ರಾತ್ಯಕ್ಷಿಕೆಗಳನ್ನು ಚಿತ್ರಕಲೆಯ ಕುರಿತು ಉಪನ್ಯಾಸವನ್ನು ನೀಡಿರುವರು. ಅಂತೆಯೇ, 1987ರಲ್ಲಿ ಧಾರವಾಡದ ಪ್ರತಿಷ್ಠಿತ ಹಾಲಭಾವಿ ಕಲಾಶಾಲೆಯಲ್ಲಿಯೂ ಪ್ರಾತ್ಯಕ್ಷಿಕೆಯನ್ನು ನೀಡಿರುವರು. ಹೀಗೆ ಕಲಾಚಟುವಟಿಕೆಗಳೊಂದಿಗೆ ಸಕ್ರೀಯವಾಗಿ ಭಾಗವಹಿಸುತ್ತಾ ಪ್ರಾಥಮಿಕ ಮತ್ತು ಪ್ರೌಢಶಾಲೆಗಳೊಂದಿಗೆ ಕಲಾಶಾಲೆಯಲ್ಲಿಯ

ವಿದ್ಯಾರ್ಥಿಗಳೊಂದಿಗೆ ಬೆರೆಯುತ್ತಾ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುತ್ತಾ ಬದುಕಿನುದ್ದಕ್ಕೂ ತಾನೇನನ್ನೂ ಬಯಸದೇ ತನ್ನಲ್ಲಿರುವುದನ್ನೆಲ್ಲಾ ಇತರರಿಗೆ ಧಾರೆಯೆರೆಯುತ್ತಾ ಸಾಗಿ ಬಂದ ಕೆ.ಬಿ.ಕುಲಕರ್ಣಿ ಅವರು ಉತ್ತಮ ಕಲಾವಿದರಾಗಿರುವುದರೊಂದಿಗೆ ಉತ್ತಮ ಗುರುಗಳಾಗಿಯೂ ಗುರುತಿಸಿ ಕೊಂಡಿದ್ದರು.

